ನಮ್ಮ ಮಾನಸ

ಸಂಪುಟ : 1 ಸೆಪ್ಟೆಂಬರ್ 2007 ಸಂಚಿಕೆ : 5



ನಮ್ಮ ಮಾನಸ

ಸೆಪ್ಟೆಂಬರ್ 2007

ಸಂಪುಟ : 1 ಸಂಚಿಕೆ : 5


Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road,
Raghavanagara
New Timberyard Layout
Bangalore - 560 026.
© : 26757159 / 32715773

ಚಂದಾ ವಿವರ

ಬಿಡಿಪ್ರತಿ	8–00 ರೂ.
ವಾರ್ಷಿಕ ಚಂದಾ (ವಿಶೇಷ ಸಂಚಿಕೆಯೊಂದಿಗೆ)	100–00 ರೂ.
ಸಂಸ್ಥೆಗಳಿಗೆ	150–00 ರೂ.

ಪರಿವಿಡಿ



ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ,
ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ
ಡಿ.ಡಿ. ಮೂಲಕ ಕಳಿಸಬಹುದು

ಸಂಪಾದಕೀಯ

ಎಲ್ಲವೂ ಅವಳ ಸುತ್ತಲೇ ಗಿರಕಿ ಹೊಡೆದು....

ತಸ್ಲೀಂ ನಜರೀನ್ ಬಾಂಗ್ಲಾ ದೇಶದ ಲೇಖಕಿ. 'ಲಜ್ಜಾ' ಕಾದಂಬರಿಯಲ್ಲಿ ಹಿಂದೂಗಳ ಮೇಲೆ ನಡೆಯುವ ಶೋಷಣೆಯನ್ನು ಕುರಿತು ಬರೆದಿದ್ದಾರೆಂಬ ಕಾರಣಕ್ಕಾಗಿ ಈಕೆಯನ್ನು ಬಾಂಗ್ಲಾದೇಶ ಗಡೀಪಾರು ಮಾಡಿದೆ. ಕಲ್ಕತ್ತದಲ್ಲಿ ಸದ್ಯಕ್ಕೆ ಆಶ್ರಯ ಪಡೆದಿರುವ ಈ ಲೇಖಕಿಯ ಬಗ್ಗೆ ಅನೇಕ ವಿವಾದಗಳಿವೆ. ಈಕೆ ಪ್ರಚಾರಪ್ರಿಯೆ, ಇಸ್ಲಾಂ ಧರ್ಮವನ್ನು ಸಾರಾಸಗಟಾಗಿ ಅಲ್ಲಗೆಳೆಯುತ್ತಾರೆ, ರೋಚಕ ಕಥೆಗಳನ್ನು ತಮ್ಮ ಬಗ್ಗೆಯೇ ಸೃಷ್ಟಿಸಿ ಸುದ್ದಿಯಾಗುತ್ತಾರೆ ಇತ್ಯಾದಿ. ಏನೇ ಇರಲಿ, ಹೈದರಾಬಾದ್‌ನಲ್ಲಿ ಇವರ ಮೇಲೆ ನಡೆದ ಆಕ್ರಮಣ ಮೂಲಭೂತವಾದಿಗಳ ವಿನಾಶಕಾರಿ ಮನಸ್ಥಿತಿಯನ್ನು ಎತ್ತಿ ಹಿಡಿದ ಮತ್ತೊಂದು ಘಟನೆಯಾಗಿದೆ.

ಮೂಲಭೂತವಾದವು ಕ್ಷುಲ್ಲಕ ಕಾರಣಗಳನ್ನು ಹಾಗೂ ರಾಜಕೀಯದ ಬೇರೆಬೇರೆ ಹರವುಗಳನ್ನು ಬಳಸಿಕೊಂಡು ಹೇಗೆ ಸ್ಫೋಟಗೊಳ್ಳುತ್ತದೆ ಎನ್ನುವುದಕ್ಕೆ ತಸ್ಲೀಂ ನಜರೀನ್ ಮೇಲೆ ನಡೆದ ಹಲ್ಲೆ ಒಂದು ಜ್ವಲಂತ ಸಾಕ್ಷಿಯಾಗಿದೆ. 'ಮಜಲೀಸ್-ಇ-ಇತ್ತಹದುಲ್ ಮುಸ್ಲಿಮೀನ್' ಓವೈಸಿ ಕುಟುಂಬದಿಂದ ನಿಯಂತ್ರಣಗೊಂಡಿರುವ ಪಕ್ಷ. ಓವೈಸಿ ಹೈದರಾಬಾದ್‌ನಿಂದ ಪಾರ್ಲಿಮೆಂಟಿಗೆ ಆಯ್ಕೆಯಾಗಿರುವ ರಾಜಕಾರಣಿ. ಈತನ ಪಕ್ಷ ಹೈದರಾಬಾದ್‌ಗೆ ಮಾತ್ರ ಸೀಮಿತವಾಗಿದೆ. ಎಡಪಕ್ಷಗಳು ನಾಗರಿಕ ಸಮಸ್ಯೆಗಳಿಗೆ ಸಮುದಾಯವನ್ನು ಸಂಘಟಿಸುವಂತೆ ಈ ಪಕ್ಷಕ್ಕೆ ಸಂಘಟಿಸಲು ಸಾಧ್ಯವಾಗಿಲ್ಲ. ಮಜಲೀಸ್-ಇ-ಇತ್ತಹದುಲ್ ಮುಸ್ಲಿಮೀನ್ ಪಕ್ಷವು ಓವೈಸಿಯವರ ಕುಟುಂಬದಿಂದ ನಿಯಂತ್ರಣಗೊಂಡಿರುವುದನ್ನು ವಿರೋಧಿಸುವ ಮುಸ್ಲಿಂ ಬಣವೊಂದು ಎಡಪಕ್ಷದ ಜೊತೆ ತನ್ನನ್ನು ತಾನು ಗುರುತಿಸಿಕೊಂಡಿದೆ. ಹೀಗಾಗಿ ರಾತ್ರೋ ರಾತ್ರಿ ಪ್ರಸಿದ್ಧಿಗೆ ಬರುವ ಹಾಗೂ ಮುಸ್ಲಿಂ ಸಮುದಾಯವನ್ನು ತನ್ನತ್ತ ಒಲಿಸಿಕೊಳ್ಳುವುದಕ್ಕಾಗಿ ಈ ಲೇಖಕಿಯ ಮೇಲೆ ಆಕ್ರಮಣದ ಅಸ್ತ್ರವನ್ನು ಬಳಸಿಕೊಳ್ಳಲಾಗಿದೆ ಎಂದು ಉರ್ದು ಮಾಧ್ಯಮಗಳು ತಸ್ಲೀಂ ನಜರೀನ್ ಮೇಲಿನ ಆಕ್ರಮಣದ ರಾಜಕೀಯವನ್ನು ಬಯಲು ಮಾಡಿವೆ. ಮೂಲಭೂತವಾದದ ಹೆಸರಿನಲ್ಲಿ ರಾಜಕೀಯ ಪಕ್ಷಗಳು ಹೇಗೆ ಮತ ರಾಜಕೀಯಕ್ಕೆ ಪ್ರಯತ್ನಿಸುತ್ತವೆ ಎಂಬುದಕ್ಕೆ ಕೂಡಾ ಇದು ಉದಾಹರಣೆಯಾಗಿದೆ.

ಜಾಗತೀಕರಣಕ್ಕೆ ವಿರೋಧೀಶಕ್ತಿಯಂತೆ ಕಾಣಿಸಿಕೊಂಡು ಬೆಳೆಯುತ್ತಿರುವ ಮೂಲಭೂತವಾದ ಇಂದಿನ ರಾಜಕೀಯ ಸಂದರ್ಭದಲ್ಲಿ ಮಹಿಳೆಯರು ಸಂಸ್ಕೃತಿಯ ಹರಿಕಾರರಾಗಿಯೇ ಇರುವಂತೆ ಒತ್ತಾಯಿಸುತ್ತದೆ. ಹಾಗಾಗಿಯೇ 'ಡ್ರೆಸ್ ಕೋಡ್' ಅನ್ನು ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಹೆಣ್ಣು ಮಕ್ಕಳ ಮೇಲೆ ಹೇರಲು ಪ್ರಯತ್ನಿಸಲಾಗುತ್ತಿದೆ. ಸ್ವಯಂಘೋಷಿತ ಸಾಂಸ್ಕೃತಿಕ ವಕ್ತಾರರಾಗುವ ಮೂಲಭೂತವಾದಿಗಳು ಧಾರ್ಮಿಕ ಆಚರಣೆಗಳಲ್ಲಿ ಪುರುಷಾಧಿಕಾರವನ್ನು ಪ್ರಶ್ನಿಸುವ ಮಹಿಳೆಯ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಹುನ್ನಾರಗಳನ್ನು ನಡೆಸಿಕೊಂಡೇ ಬಂದಿದ್ದಾರೆ. ಅದೊಂದು ಐತಿಹಾಸಿಕ ಸತ್ಯ.

ಮಸೀದಿಗಳಲ್ಲಿ ಮಹಿಳೆಗೆ ಪ್ರಾರ್ಥನೆ ಮಾಡುವ ಹಕ್ಕು ಧರ್ಮದಲ್ಲಿದ್ದರೂ, ಆಚರಣೆಯಲ್ಲಿ ಪುರುಷಾಧಿಕಾರ ಇದನ್ನು ಹತ್ತಿಕ್ಕಿದೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ ಲೇಖಕಿ ಬಾನುಮುಷ್ತಾಕ್ ಧರ್ಮದಿಂದ ಸ್ವಲ್ಪ ಕಾಲ ಬಹಿಷ್ಕೃತರಾಗಿದ್ದರು. 'ಇಸ್ಲಾಂ ಧರ್ಮದಲ್ಲಿ ಮಹಿಳೆಯರಿಗೆ ಬಹಳಷ್ಟು ಸ್ವಾತಂತ್ರ್ಯವಿದೆ, ಮಹಿಳೆಗೆ ಆಸ್ತಿ ಹಕ್ಕು ನೀಡಿದ ಮೊದಲ ಧರ್ಮ ಇಸ್ಲಾಂ, ಬುರ್ಖಾ ಹಾಕುವಂತೆ ಪ್ರವಾದಿ ಮಹಮದ್ ಎಲ್ಲೂ ಹೇಳಿಲ್ಲ. ಆದರೆ ಪುರುಷರು ಮಹಿಳೆಯರನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳಲು ಈ ರೀತಿಯ ಕಟ್ಟುಗಳನ್ನು ಹೇರುತ್ತಿದ್ದಾರೆ' ಎನ್ನುವ ಸಾರಾ ಅಬೂಬ್‌ಕರ್ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿ ಪ್ರಕಟಿಸಿದಾಗ ಮೂಲಭೂತವಾದಿಗಳ ಕೆಂಗಣ್ಣಿಗೆ ಗುರಿಯಾಗಿದ್ದರು. ಪುತ್ತೂರು ಕಾರ್ಯಕ್ರಮವೊಂದರಲ್ಲಿ ಇವರ ಮೇಲೆ ಹಲ್ಲೆ ನಡೆಸಲಾಗಿತ್ತು.

ಮಹಿಳೆಯರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲು, ನಾಶಗೊಳಿಸಲು ಎಲ್ಲಾ ಧರ್ಮದ ಮೂಲಭೂತವಾದಿ ಶಕ್ತಿಗಳೂ ಕಾದುಕೊಂಡೇ ಇರುತ್ತವೆ. ಉದಾ: ವಾಟರ್ ಸಿನೆಮಾ. ಹಿಂದೆ ಉತ್ತರ ಪ್ರದೇಶದ ಅನೇಕ ಪ್ರದೇಶಗಳಿಂದ ಬಾಲವಿಧವೆಯರನ್ನು ಕರೆದು ತಂದು ಬೃಂದಾವನದಲ್ಲಿ ಬಿಟ್ಟುಬಿಡಲಾಗುತ್ತಿತ್ತು. ಮನೆ, ಮಠ, ಆಸ್ತಿ ಏನನ್ನೂ ಹೊಂದಿರದ ಈ ವಿಧವೆಯರು ಕಾಶಿಯಲ್ಲಿ ದಾರುಣವಾದ ಜೀವನ ನಡೆಸುತ್ತಿದ್ದರು. ಇವರ

ಜೀವನ ಚಿತ್ರಣ ತೋರಿಸಕೂಡದು, ಅದು ಸಂಸ್ಕೃತಿಗೆ ಅನ್ಯಾಯ ಮಾಡಿದಂತೆ ಎನ್ನುವ ರೀತಿಯಲ್ಲಿ ಸಂಸ್ಕೃತಿಯ ವಕ್ತಾರರು ನಿರ್ದೇಶಕಿಗೆ ಹಾಗೂ ಸರ್ಕಾರಕ್ಕೆ ಒತ್ತಡವನ್ನು ಹೇರಿ ಸಿನೆಮಾ ಶೂಟಿಂಗನ್ನು ರದ್ದುಗೊಳಿಸಿದ್ದರು. 'ಫೈರ್' ಸಿನೆಮಾ ಇಬ್ಬರು ಮಹಿಳೆಯರ 'ಸಲಿಂಗ ಕಾಮ'ವನ್ನು ಚಿತ್ರೀಕರಿಸಿದ್ದರಿಂದ ಇದು ಧರ್ಮದ ವಿರುದ್ಧವಾದುದು ಎಂಬ ಹಿನ್ನೆಲೆಯಲ್ಲಿ ಇದರ ಪ್ರದರ್ಶನವನ್ನು ಬಹಿಷ್ಕರಿಸುವಂತೆ ಆಕ್ರಮಣಗಳು ನಡೆದಿದ್ದವು. ಯಾವುದೇ ಧರ್ಮದ ಮೂಲಭೂತವಾದಿಗಳು ಸ್ವಯಂಘೋಷಿತ ಸಂಸ್ಕೃತಿ, ಧರ್ಮರಕ್ಷಕರಾಗಿ, ವಕ್ತಾರರಾಗಿ ಈ ರೀತಿಯ ಆಕ್ರಮಣಗಳನ್ನು ನಡೆಸಿಕೊಂಡೇ ಬರುತ್ತಿದ್ದಾರೆ. ಪುರುಷ ಲೇಖಕರೂ ಇದಕ್ಕೆ ಹೊರತಾಗಿಲ್ಲ. 'ಅನುದೇವಾ...', 'ಧರ್ಮರಾಜಕಾರಣ'ದಂತಹ ಕೃತಿಗಳ ಬಹಿಷ್ಕಾರದಲ್ಲೂ ಇದನ್ನು ಗಮನಿಸಬಹುದಾಗಿದೆ. ಇವೆಲ್ಲ ಖಂಡನಾರ್ಹ ಸಂಗತಿಗಳು. ಅಭಿಪ್ರಾಯ ಭೇದವನ್ನು ಪರಿಹರಿಸಿಕೊಳ್ಳಲು ಹಲವು ಮಾರ್ಗಗಳಿವೆ.

ತಸ್ಲೀಂ ನಜರೀನ್ ಮೇಲೆ ಹೈದರಾಬಾದ್‌ನಲ್ಲಿ ನಡೆದ ಆಕ್ರಮಮಣವನ್ನು 'ನಮ್ಮ ಮಾನಸ' ಖಂಡಿಸುತ್ತದೆ. ಮಹಿಳೆಯರನ್ನು ಮೌನವಾಗಿಸುವ, ಅವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವ ಈ ಪ್ರಯತ್ನಗಳ ವಿರುದ್ಧ ಸ್ತ್ರೀವಾದಿಗಳು ಧ್ವನಿ ಎತ್ತಿದ್ದಾರೆ, ಸಂಘಟಿತರಾಗಿದ್ದಾರೆ, ಹೋರಾಟ ಮಾಡಿದ್ದಾರೆ. ಇಂದಿನ ಜಾಗತೀಕರಣದ ರಾಜಕೀಯ ಹಿನ್ನೆಲೆಯಲ್ಲಿ - ಧರ್ಮದ ಪುನರ್ ಮೌಲ್ಯೀಕರಣ, ಸಂಸ್ಕೃತಿ, ದೇಸೀಕರಣದ ಹೆಸರುಗಳಲ್ಲಿ ಮೂಲಭೂತವಾದ ತನ್ನ ಪ್ರಬಲವಾದ ಬಾಹುಗಳಿಂದ, ನಯ-ನಾಜೂಕುಗಳಿಂದ ಮಹಿಳೆಯರನ್ನು ಹಿಮ್ಮುಖವಾಗಿ ನಡೆಸಲು ಪ್ರಯತ್ನಿಸುತ್ತಲೇ ಇದೆ. ಆದರೆ ಇದೇ ಸಂದರ್ಭದಲ್ಲಿ ಅಲಹಾಬಾದ್‌ನಲ್ಲಿ ಎಲ್ಲಾ ಧರ್ಮದ ಮೂಲಭೂತವಾದಿಗಳನ್ನು ಸಮಾನಾಂತರವಾಗಿ ದೂರದಲ್ಲಿಟ್ಟು ಮಹಿಳೆಯರ ಪರ ಹೋರಾಟ ನಡೆಸುವ ಸೆಕ್ಯುಲರ್ ಮುಸ್ಲಿಂ ಮಹಿಳಾ ಸಂಘಟನೆಯೊಂದು ರಾಷ್ಟ್ರೀಯ ಮಟ್ಟದಲ್ಲಿ ಅಸ್ತಿತ್ವ ಪಡೆದುಕೊಳ್ಳುತ್ತಿದೆ. ಎಲ್ಲಾ ಧರ್ಮೀಯ ಮಹಿಳೆಯರನ್ನೊಳಗೊಂಡು ರೂಪ-ರೇಷೆಗಳನ್ನು ಚರ್ಚಿಸಿ, ಈ ಸಂಘಟನೆಯನ್ನು ಕಾರ್ಯರೂಪಕ್ಕೆ ತರುತ್ತಿರುವುದು ಕೋಮುವಾದಿ ರಾಜಕೀಯಕ್ಕೊಂದು ಸಮರ್ಥ ಉತ್ತರ ಎನ್ನಬಹುದಾಗಿದೆ.

* * *

ಐ.ಎನ್.ಜಿ. ವೈಶ್ಯ ಬ್ಯಾಂಕ್‌ನ ಉದ್ಯೋಗಿ ಶೈಲಜಾ ಮೇಲಧಿಕಾರಿಯ ಲೈಂಗಿಕ ಕಿರುಕುಳ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬ್ಯಾಂಕ್‌ನ ಪ್ರಾದೇಶಿಕ ಮುಖ್ಯಸ್ಥ ಎನ್.ಎಸ್. ಭರತ್ ಆಕೆಯ ಮೊಬೈಲ್‌ಗೆ ಎಸ್.ಎಂ.ಎಸ್. ಕಳಿಸುವುದರ ಮೂಲಕ ಲೈಂಗಿಕ ಕಿರುಕುಳವನ್ನು ನೀಡುತ್ತಿದ್ದರು. ಶೈಲಜ ರಾಜ್ಯ ಮಹಿಳಾ ಆಯೋಗಕ್ಕೆ ಹಾಗೂ ಬ್ಯಾಂಕ್‌ನ ಮೇಲಧಿಕಾರಿಗಳಿಗೆ ದೂರು ಸಹ ನೀಡಿದ್ದರು. ಅವರ ವೈವಾಹಿಕ ಜೀವನದಲ್ಲೂ ಬಿರುಕುಬಿಟ್ಟಿದ್ದು, ಗಂಡನಿಂದ ವಿಚ್ಛೇದನ ಪಡೆಯುವ ಪ್ರಯತ್ನದಲ್ಲಿದ್ದರು. ಲೈಂಗಿಕ ಕಿರುಕುಳವನ್ನು ತಡೆಯಲು ಸಾಧ್ಯವಾಗದಿದ್ದಾಗ ಶೈಲಜಾ ಆತ್ಮಹತ್ಯೆಗೆ ಶರಣಾಗಿದ್ದಾರೆ. ಸಂಘಟಿತ ಕ್ಷೇತ್ರದಲ್ಲಿ ದುಡಿಯುವ ವಿದ್ಯಾವಂತ ಮಹಿಳೆಗೇ ಭದ್ರತೆ ಇಲ್ಲವೆನ್ನುವುದಾದರೆ ಇನ್ನು ಅಮಾಯಕ ಮಹಿಳೆಯ ಗತಿಯೇನು? ದುಡಿಯುವ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯದ ವಿರುದ್ಧ ದೂರು ನೀಡಲು, ತನಿಖೆ ಮಾಡಲು ಸಮಿತಿಯನ್ನು ರಚಿಸಬೇಕೆಂಬ ಕಾನೂನು ಇದ್ದರೂ, ಇದು ಎಷ್ಟರಮಟ್ಟಿಗೆ ಮಹಿಳೆಯರ ರಕ್ಷಣೆಗೆ ನೆರವಾಗುತ್ತಿದೆ? ಈ ಘಟನೆಯ ವಿರುದ್ಧ ದಿನಾಂಕ 27-8-07ರಂದು ಜನವಾದಿ ಮಹಿಳಾ ಸಂಘಟನೆ, ಬ್ಯಾಂಕ್ ನೌಕರರ ಯೂನಿಯನ್, ಸಮಾನತಾ ವೇದಿಕೆ, ಮಾನಸ ಮುಂತಾದ ಸಂಘಟನೆಗಳು ಬ್ಯಾಂಕ್ ಮುಂದೆ ಪ್ರತಿಭಟನೆ ನಡೆಸಿ, ಬ್ಯಾಂಕ್ ಆಡಳಿತವರ್ಗಕ್ಕೆ ಹಾಗೂ ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ನಿರ್ಮಲಾ ವೆಂಕಟೇಶ್‌ರವರಿಗೆ ನಿಷ್ಪಕ್ಷಪಾತ ತನಿಖೆ ನಡೆಸುವಂತೆ ಒತ್ತಾಯಿಸಿ ಮನವಿಯನ್ನು ಸಲ್ಲಿಸಿದವು.

* * *

ಪುರುಷ ಪ್ರಧಾನ ಸಮಾಜವು ಅತ್ಯಂತ ಕ್ರೂರ, ಅಮಾನುಷವಾದ ಹಿಂಸೆಯನ್ನು ಹುಟ್ಟುಹಾಕುತ್ತದೆ. ಆಸಿಡ್ ಬಳಸಿ ಮಹಿಳೆಯರನ್ನು ಹಿಂಸಿಸುವುದು ಪುರುಷ ಪ್ರಧಾನ ಸಮಾಜ ವ್ಯಕ್ತಪಡಿಸುವ ಪರಮಾವಧಿ ಹಿಂಸೆಯ ಸ್ವರೂಪ. ಇತ್ತೀಚೆಗೆ ಮೈಸೂರಿನಲ್ಲಿ 26 ವರ್ಷದ ಹೀನಾ ಫಾತಿಮಾ ಗಂಡನ ಅಮಾನುಷ ಕ್ರೌರ್ಯಕ್ಕೆ ಬಲಿಯಾಗಿದ್ದಾಳೆ. ಮದುವೆಯಾಗಿ ನಾಲ್ಕು ಮಕ್ಕಳನ್ನು ಪಡೆದಿದ್ದ ಫಾತಿಮಾಳ ಗಂಡ, ವರದಕ್ಷಿಣೆಯನ್ನು ತರುವಂತೆ ಸದಾ ಹಿಂಸೆಯನ್ನು ನೀಡುತ್ತಲೆ ಇದ್ದ. ಈ ಕಿರುಕುಳವನ್ನು ತಡೆಯಲಾರದೆ ಆಕೆ ಆಗಾಗ ತವರು ಮನೆಗೆ ಬರುತ್ತಿದ್ದಳು. ಪುನಃ ಮನೆಯವರ ಒತ್ತಡಕ್ಕೆ ಮಣಿದು ಗಂಡನ ಮನೆಗೆ ವಾಪಸ್ ಹೋಗುತ್ತಿದ್ದಳು. ಒಮ್ಮೆ ತವರು ಮನೆಯಲ್ಲಿದ್ದ ಫಾತಿಮಾಳನ್ನು ಆಕೆಯ ಮಾವ ಮಗ ಸರಿಯಾಗಿ ನೋಡಿಕೊಳ್ಳುತ್ತಾನೆ ಎಂಬ ಭರವಸೆಯನ್ನು ನೀಡಿ ಮನೆಗೆ ಕರೆದುಕೊಂಡು ಬಂದಿದ್ದ. ಗಂಡ ಬೇರೆ ಮನೆಯನ್ನು ಮಾಡಿದ, ಫಾತಿಮಾ ಆ ಮನೆಯಲ್ಲಿ ಅತಿಯಾದ ಕ್ರೌರ್ಯಕ್ಕೆ ಬಲಿಯಾದಳು. ಆಕೆಯನ್ನು ಸರಿಯಾಗಿ ಹೊಡೆದು, ಸಿಗರೇಟಿನಿಂದ ಕಣ್ಣನ್ನು ಸುಟ್ಟು, ಸಾರಾಯಿಯಲ್ಲಿ ಆಸಿಡ್ ಕುಡಿಸಿದ್ದಾನೆ ಕ್ರೂರಿ ಗಂಡ. ಅಷ್ಟಕ್ಕೂ ತೃಪ್ತಿಯಾಗದೆ, ಆಕೆಯ ಮೇಲೆ ಆಸಿಡ್ ಸುರಿದಿದ್ದಾನೆ. ವಿಕೃತ ಮನಸ್ಸಿನ ಆತ ಆಕೆಯನ್ನು ಆಸ್ಪತ್ರೆಗೂ ಸೇರಿಸಲು ಬಿಡುತ್ತಿರಲಿಲ್ಲ. ಬಲವಂತವಾಗಿ ಆಕೆಯನ್ನು ಆಸ್ಪತ್ರೆಗೆ ಸೇರಿಸಲಾಯಿತು. ಫಾತಿಮಾ ಕೊನೆಯುಸಿರೆಳೆದಳು. ಆಸಿಡ್ ದಾಳಿಯನ್ನು 'ಸೀಸ' (ಮಹಿಳೆಯರ ಮೇಲಿನ ಆಸಿಡ್ ದಾಳಿ ವಿರೋಧೀ ಪ್ರಚಾರ ಆಂದೋಲನ ಮತ್ತು ಹೋರಾಟ) ವೇದಿಕೆಯವರು ನಿರಂತರವಾಗಿ ಪ್ರತಿಭಟಿಸುತ್ತಲೇ ಬಂದಿದ್ದಾರೆ. ಈ ಹೋರಾಟದಿಂದ ಕೆಲವರಿಗಾದರೂ ಕೊಂಚ ನ್ಯಾಯ, ಕೆಲವು ಸವಲತ್ತುಗಳನ್ನು ನೀಡಲು ಸರ್ಕಾರ ಒಪ್ಪಿಕೊಂಡಿದೆ. ಮಹಿಳೆಯರ ಮೇಲೆ ನಡೆಯುವ ಇಂತಹ ದೌರ್ಜನ್ಯಗಳನ್ನು ವಿರೋಧಿಸಲು ಮಹಿಳೆಯರು ಹೆಚ್ಚುಹೆಚ್ಚು ಸಂಘಟಿತರಾಗಿ ಹೋರಾಡಬೇಕಿದೆ.

* * *

ವಿಶೇಷ ಸಂಚಿಕೆಗೆ ಬಂದಿದ್ದ ಲೇಖನಗಳನ್ನು ಪ್ರತಿ ಸಂಚಿಕೆಯಲ್ಲೂ ಪ್ರಕಟಿಸುತ್ತಿದ್ದೇವೆ. ಹೊಸ ಚಿಂತನೆಯ ಲೇಖನಗಳಿಗೆ, ನಿಮ್ಮೂರಿನಲ್ಲಿ-ನಿಮ್ಮ ನೆರೆಹೊರೆಯಲ್ಲಿ ನಡೆದ ಘಟನೆಗಳು, ಹೋರಾಟದ ಯಾವುದೇ ವಿವರಗಳಿಗೂ ಪತ್ರಿಕೆಯಲ್ಲಿ ಅವಕಾಶವಿರುತ್ತದೆ. ತಮ್ಮ ಪ್ರತಿಕ್ರಿಯೆಗೆ ಸ್ವಾಗತವಿದೆ. ಈ ಸಂಚಿಕೆಯ ಮುಖಪುಟದ ಚಿತ್ರವನ್ನು ರಚಿಸಿಕೊಟ್ಟ ಕಲಾವಿದ ಎಂ.ಎಸ್. ಮೂರ್ತಿ ಅವರಿಗೆ ಕೃತಜ್ಞತೆಗಳು. ಕಲೆಗೆ ಸಂಬಂಧಿಸಿದ ಎಂ.ಎಚ್. ಕೃಷ್ಣಯ್ಯನವರ ಲೇಖನಕ್ಕೆ ವರ್ಣಚಿತ್ರಗಳನ್ನು ಬಳಸಿದರೆ ಹೆಚ್ಚು ಅರ್ಥ ಸಂವಹನ ಸಾಧ್ಯವಿತ್ತು. ನಮ್ಮ ಆರ್ಥಿಕ ಸ್ಥಿತಿಗೆ ಆ ವೆಚ್ಚ ಭರಿಸಲಾಗಲಿಲ್ಲ, ಸಹಕರಿಸಿರಿ. ❑

ಅಗ್ನಿ ಪರೀಕ್ಷೆ : ಒಂದು ದೃಶ್ಯ ಕಲ್ಪನೆ

● ಪ್ರೊ. ಎಂ.ಎಚ್. ಕೃಷ್ಣಯ್ಯ

ಸಾಹಿತ್ಯ ಮತ್ತು ದೃಶ್ಯ ಕಲೆಗಳಲ್ಲಿ ಪುರಾಣ, ಇತಿಹಾಸ ವಸ್ತುಗಳನ್ನು ಬಳಸಿ ಕೃತಿ ರಚನೆಮಾಡುವುದು ಪ್ರಾಚೀನ ಕಾಲದಿಂದಲೂ ರೂಢಿಯಾಗಿ ಬಂದಿದೆ. ಗ್ರೀಕರ ಪುರಾಣ ಕಥೆಗಳು, ಅನಂತರ ಕ್ರೈಸ್ತಮತದ ವಸ್ತು ಚಿತ್ರಣ ಪಾಶ್ಚಾತ್ಯರಲ್ಲಿ ಶತಮಾನದ ಹಿಂದಿನ ವರೆಗೂ ಕಂಡುಬರುತ್ತದೆ. ಭಾರತದಲ್ಲಿ ಕ್ರಿಸ್ತಶಕೆಯ ಅನಂತರ ಕಾಲಕ್ರಮೇಣ ಪುರಾಣಗಳ ರಚನೆಯೊಡನೆ ದೃಶ್ಯಕಲೆಗಳಲ್ಲೂ ಅವು ಕಾಣಿಸಿಕೊಂಡುವು. ಪುರಾಣ ಕಥೆಗಳು, ದೇವದೇವತೆಗಳ ಕಲ್ಪನೆಗಳು ಭಕ್ತಿಶ್ರದ್ಧೆ ನಂಬಿಕೆಗಳ ಕಾರಣವಾಗಿ ಜನಪ್ರಿಯವೂ ಆದುವು. ಶಿಲ್ಪ ಕಲಾವಿದರೂ ಭಕ್ತಿ ಶ್ರದ್ಧೆಗಳ ಹಿನ್ನೆಲೆಯಲ್ಲೆ ತಮ್ಮ ಕಲಾತ್ಮಕ ಆಸಕ್ತಿಯನ್ನು ಸೌಂದರ್ಯ ಅಭಿರುಚಿಯನ್ನೂ ವ್ಯಕ್ತಪಡಿಸಿದರು. ಕಾಲ ಮತ್ತು ಪ್ರಾದೇಶಿಕ ಭೇದದಿಂದ ಶೈಲಿಯಲ್ಲೂ ವೈವಿಧ್ಯ ಕಾಣಿಸಿಕೊಂಡಿತು. ಕಲಾಭಿವ್ಯಕ್ತಿಯ ದೃಷ್ಟಿಯೇ ಬದಲಾದದ್ದು ಇಪ್ಪತ್ತನೆಯ ಶತಮಾನದಲ್ಲಿ. ಪಾರಂಪರಿಕ ದೃಷ್ಟಿಗಿಂತ ಭಿನ್ನವಾಗಿ ಆಧುನಿಕ ಕಲಾವಿದರು ಪುರಾಣವಸ್ತುಗಳನ್ನು ಬಳಸಿಕೊಂಡರು. ಈ ವ್ಯತ್ಯಾಸಗಳಿಗೆ ಮುಖ್ಯವಾಗಿ ಎರಡು ಕಾರಣಗಳು : ಒಂದು, ವೈಯಕ್ತಿಕ ಸಾಧನೆಯ ನೆಲೆ; ಎರಡು, ಕಾಲ ಸಂದರ್ಭ ಹಾಗೂ ಐತಿಹಾಸಿಕ / ಸಾಂಸ್ಕೃತಿಕ ಸಂದರ್ಭದ ನೆಲೆ. ಪುರಾಣವಸ್ತು ನಿರ್ವಹಣೆಯ ದೃಷ್ಟಿಯಲ್ಲಾಗಿರುವ ಬದಲಾವಣೆಯನ್ನು, ನವ್ಯ, ನವ್ಯೋತ್ತರ ಕಾಲದ ಚಿಂತನೆಯ ರೀತಿಯನ್ನು, ಸ್ತ್ರೀ ಸಂವೇದನೆಯು ಸೇರಿದಂತೆ, ತಿಳಿಯಲು ಕಲಾವಿದೆ ಸುರೇಖಾ ಅವರು ಸೀತೆಯ ಅಗ್ನಿ ಪರೀಕ್ಷೆಯ ಪ್ರಸಂಗವನ್ನು ಕುರಿತು ದೃಶ್ಯಾತ್ಮಕವಾಗಿ ಪ್ರತಿಕ್ರಿಯಿಸಿರುವ ವಿಧಾನ ವಿಶಿಷ್ಟವಾದದ್ದು. ಆ ವೈಶಿಷ್ಟ್ಯದ ಸ್ಪಷ್ಟ ಅರಿವಾಗಲು, ಪುರಾಣವಸ್ತುವನ್ನು ಚಿತ್ರಗಳ ಮೂಲಕ ಮನೆಮಾತಾಗಿಸಿದ ರಾಜಾ ರವಿವರ್ಮನ ನಿರ್ವಹಣೆಯ ವಿಧಾನವನ್ನೂ ಗಮನಿಸಬೇಕು.

19ನೇ ಶತಮಾನದ ಉತ್ತರಾರ್ಧದಲ್ಲಿ ರಾಜಾ ರವಿವರ್ಮ ಚಿತ್ರರಚನೆ ಮಾಡಿದ್ದು, ಆ ಕಾಲದಲ್ಲಿ ಸಾಂಪ್ರದಾಯಿಕ ಚಿತ್ರಕಲೆ ಪ್ರಚಲಿತವಾಗಿತ್ತು. ದಕ್ಷಿಣ ಭಾರತದಲ್ಲಿ ಮೈಸೂರು ತಂಜಾವೂರು ಶೈಲಿಗಳು ರೂಢಿಯಲ್ಲಿದ್ದುವು. ಆಗಿನ್ನೂ ಅಜಂತಾ ಗುಹೆಗಳ ಭಿತ್ತಿಚಿತ್ರಗಳು ಬೆಳಕು ಕಂಡಿರಲಿಲ್ಲ. ಬ್ರಿಟಿಷ್ ಅಕಾಡೆಮಿಕ್ ಶೈಲಿಯ ತೈಲವರ್ಣ ರಚನೆಯ ಪ್ರಭಾವಕ್ಕೆ ಒಳಗಾಗಿದ್ದ ರವಿವರ್ಮ ಪಾಶ್ಚಾತ್ಯ ಮಾದರಿಯನ್ನು ಸ್ವೀಕರಿಸಿದ. ಮರಾಠಿ ರಂಗಭೂಮಿ, ಪಾರಸಿ ರಂಗಭೂಮಿಯ ಪೌರಾಣಿಕ ನಾಟಕಗಳನ್ನು ನೋಡಿದ್ದ ಕಾರಣ ಅವುಗಳ ಅಂಶವೂ ಅವನ ಚಿತ್ರರಚನೆಯಲ್ಲಿ ಸೇರಿದುವು. ಇದರಿಂದಾಗಿ ಪುರಾಣವಸ್ತು ನಿರ್ವಹಣೆಯಲ್ಲಿ, ಭಾರತೀಯ ಶೈಲೀಕೃತ ಪ್ರತೀಕಾತ್ಮಕ ದೃಷ್ಟಿಗಿಂತ ಭಿನ್ನವಾದ, ನೈಜಶೈಲಿಯ ನಾಟಕೀಯ ದೃಶ್ಯಕಲ್ಪನೆಯ ಚಿತ್ರಗಳನ್ನು ಆತ ರಚಿಸಿದ. ಇಡೀ ಪ್ರಸಂಗದಲ್ಲಿ ಉತ್ಕಟ ಸನ್ನಿವೇಶವನ್ನು ಆರಿಸಿ ನಿರೂಪಿಸುವುದು, ಸನ್ನಿವೇಶದಲ್ಲಿ ಪಾತ್ರಗಳ ಕ್ರಿಯಾಪ್ರಜ್ಞೆಯನ್ನು ವ್ಯಕ್ತಪಡಿಸುವುದು, ಎಂದರೆ ನಾಟಕ ಸ್ನನಿವೇಶದ ಒಂದು ಕ್ಷಣವನ್ನು ಸ್ಥಗಿತಗೊಳಿಸಿ ಪ್ರತಿಪಾದಿಸುವುದು. ಇದು ಪಾಶ್ಚಾತ್ಯರಲ್ಲಿ ಕಂಡುಬರುವ ಫ್ರೀಜ್ ವಿಧಾನ. ಆ ಕಾಲದ ಕಂಪೆನಿ ನಾಟಕಗಳಂತೆ ಪುರಾಣ ವಸ್ತುವಿನ ವೈಭವೀಕರಣ ಚಿತ್ರರಚನೆಯಲ್ಲಿ ಕಾಣಬರುತ್ತದೆ. ಅನುಭವ ಚಿಂತನೆಯನ್ನು ಪ್ರತಿಕಾತ್ಮಕವಾಗಿ, ಸೂಚ್ಯತೆ ಧ್ವನಿಗಳನ್ನು ಬಳಸಿ ಚಿತ್ರಿಸುವುದಕ್ಕಿಂತ ನೈತಿಕತೆಗೆ ಒತ್ತುನೀಡಿ ವೈಭವೀಕರಿಸುವುದು ಆತನ ಪ್ರಧಾನ ದೃಷ್ಟಿ. ನವ್ಯ, ನವ್ಯೋತ್ತರ ಕಾಲದ ಕಲಾವಿದರು ಪುರಾಣ ವಸ್ತು ನಿರ್ವಹಣೆಯಲ್ಲಿ ಪ್ರತಿಪಾದನಾತ್ಮಕ ದೃಶ್ಯಕಲ್ಪನೆಗಿಂತ ಚಿಂತನೆ, ಅಭಿವ್ಯಕ್ತಿ, ಪ್ರಯೋಗ ಸಾಧ್ಯತೆಗಳಿಗೆ ಪ್ರಾಧಾನ್ಯ ನೀಡಿದರು. ಇವರದು ಪ್ರತೀಕಾತ್ಮಕ ಅಭಿವ್ಯಕ್ತಿ. ರಾಮಾಯಣ ಆಧಾರಿತ ಸಮುದ್ರರಾಜನ ಅಹಂಕಾರ ಮರ್ದನ, ಜಟಾಯು ವಧೆ ಮುಂತಾದ ರವಿವರ್ಮನ ನೈಜಶೈಲಿಯ ಜನಪ್ರಿಯ ಚಿತ್ರಗಳನ್ನು, ಅಲ್ಲಿನ ನಾಟಕೀಯ ಕಲ್ಪನೆಯನ್ನು ಗಮನಿಸಬಹುದು.

ಪುರಾಣ ಕಥಾ ಪ್ರಸಂಗಗಳನ್ನು, ದೇವದೇವತೆಗಳ ಚಿತ್ರಗಳನ್ನು ರಾಜಾ ರವಿವರ್ಮ ಅತ್ಯಂತ ಜನಪ್ರಿಯಗೊಳಿಸಿದ. ಓಲಿಯೊಗ್ರಫಿ ಪ್ರಿಂಟ್‌ಗಳ ಮೂಲಕ ಆತನ ಚಿತ್ರಗಳು ಶ್ರೀಮಂತರು, ಸಾಮಾನ್ಯ ಜನರು ಎಂಬ ಭೇದವಿಲ್ಲದೆ ಎಲ್ಲರ ಮನೆಗಳನ್ನೂ ಅಲಂಕರಿಸಿದುವು. ಇಂದಿಗೂ ಹಳೆಯ ಕಾಲದ ಮನೆಗಳಲ್ಲಿ ಆ ಪ್ರಿಂಟ್‌ಗಳನ್ನು ಕಾಣಬಹುದು. ಭಾರತದ ಕಾವ್ಯ ಮತ್ತು ರೂಪಕ ಕಥೆಗಳ ಕಾಲ್ಪನಿಕ ಸೌಂದರ್ಯವನ್ನು ಚಿತ್ರಿಸುವಲ್ಲಿ ಆತನಲ್ಲಿ ಕಾವ್ಯ ಕಲ್ಪನಾಶಕ್ತಿ ಕಾಣಬರುವುದಿಲ್ಲ ಎನ್ನುತ್ತಾರೆ ಹ್ಯಾವೆಲ್ ಅವರು. ಆ ಕಾಲಕ್ಕೆ ಆನಂದಕುಮಾರ ಸ್ವಾಮಿಯವರು, ಭಾರತೀಯ ಮಹಾಕಾವ್ಯಗಳ ವಸ್ತು ನಿರ್ವಹಣೆಯಲ್ಲಿ ನಾಟಕೀಯ ಪರಿಕಲ್ಪನೆ ಕಾಣಬರುತ್ತದೆ. ಆದರೆ ಕಲ್ಪನೆಯ ಮತ್ತು ಭಾರತೀಯ ಅನುಭೂತಿಗಳ ಅಭಾವ ಕಾಣಬರುತ್ತದೆ; ಒಬ್ಬ ಪಾಶ್ಚಾತ್ಯ ಕಲಾವಿದ್ಯಾರ್ಥಿ ಭಾರತೀಯ ಸಾಹಿತ್ಯ ಮತ್ತು ಜೀವನವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡದೆ ಮೇಲುಮೇಲಿನ ತಿಳಿವಳಿಕೆಯಿಂದ ರಚಿಸಬಹುದಾದಂತೆ ಅವನ ಚಿತ್ರಗಳಿವೆ ಎಂದಿದ್ದಾರೆ.

ಗ್ರಿಸೆಲ್ಡಾ ಪೊಲಾಕ್ ಹೇಳುವಂತೆ 'ದೃಶ್ಯ ಕಲೆಗಳಲ್ಲಿ ತಲೆಮಾರುಗಳು ಮತ್ತು ಭೌಗೋಳಿಕ ನೆಲೆಗಳು ಹಾಗೂ ಚರಿತ್ರೆ ಮತ್ತು ಸಮಾಜೋ-ಸಾಂಸ್ಕೃತಿಕ ಎಂಬ ಎರಡು ಅಕ್ಷಗಳ ಹಿನ್ನೆಲೆಯಲ್ಲಿ ಸೃಜನಶೀಲತೆ ತನ್ನ ಅಸ್ತಿತ್ವವನ್ನು ಸ್ಪಷ್ಟಪಡಿಸಿಕೊಳ್ಳುತ್ತದೆ' ಎಂಬುದು ವಾಸ್ತವ. ರಾಜಾ ರವಿವರ್ಮನ ಕಾಲದಿಂದ ಬಹಳ ದೂರ ಬಂದಿದ್ದೇವೆ. ಪ್ರಯೋಗ ಸಾಧ್ಯತೆಗಳ ತಂತ್ರವಿಧಾನಗಳ ಹುಡುಕಾಟ ನಿರಂತರ ನಡೆದಿದೆ. ಈ ಹಿನ್ನೆಲೆಯಲ್ಲಿ ಕಲಾವಿದೆ ಸುರೇಖಾ ಅವರು 'ಶ್ರೀ ರಾಮಾಯಣ ದರ್ಶನಂ'ನ ಒಂದು ಪ್ರಸಂಗವನ್ನು ನಿರ್ವಹಿಸಿರುವ ಬಗೆ ವಿಶಿಷ್ಟ ಎನಿಸುತ್ತದೆ. ಮಹಾಕವಿಯೊಡನೆ ಒಬ್ಬ ಕಲಾವಿದೆಯ ಪ್ರತಿಭಾ ಸಂವಾದದಂತೆ ತೋರುತ್ತದೆ.

'ಶ್ರೀ ರಾಮಾಯಣ ದರ್ಶನಂ'ನ 'ರಯ್‌ಗೆ ಕರೆದೊಯ್, ಓ ಅಗ್ನಿ' ಸಂಚಿಕೆಯಲ್ಲಿ ಸೀತೆಯ ಅಗ್ನಿಪರೀಕ್ಷಾ ಪ್ರಸಂಗವಿದೆ. ಕುವೆಂಪು ಅವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಅವರ ಸಾಹಿತ್ಯದಿಂದ ಆರಿಸಿದ ಭಾಗಗಳನ್ನು ಆಧರಿಸಿ ನಲವತ್ತೈದು ಕಲಾವಿದರಿಂದ ಚಿತ್ರರಚನೆ ಮಾಡಿಸಲಾಯಿತು. ನಿರೂಪಣಾ ಚಿತ್ರಗಳು, ಇಲಸ್ಟ್ರೇಷನ್ ಆಗಿ ಅಲ್ಲ, ಒಂದು ಮಾಧ್ಯಮದಿಂದ ಮತ್ತೊಂದು ಮಾಧ್ಯಮಕ್ಕೆ ಮಾಡುವ ರೂಪಾಂತರ. ಅಥವಾ ಕಾವ್ಯಕ್ಕೆ ಕಲಾವಿದನ/ಳ ದೃಶ್ಯಾತ್ಮಕ ಪ್ರತಿಕ್ರಿಯೆ. 'ದರ್ಶನಂ'ನಲ್ಲಿ ಬರುವ ಅಗ್ನಿಪರೀಕ್ಷೆ ಕಾವ್ಯಭಾಗವನ್ನು ಕಲಾವಿದೆ ಸುರೇಖಾ ಅವರಿಗೆ ಒಪ್ಪಿಸಲಾಗಿತ್ತು. ಅಗ್ನಿ ಪರೀಕ್ಷಾ ಪ್ರಸಂಗವು ಕಲಾವಿದೆಯ ದೃಢವಾದ ವಾಸ್ತವಪ್ರಜ್ಞೆ ಅಪೂರ್ವ ದೃಶ್ಯಾತ್ಮಕ ಕಲ್ಪನೆಯಾಗಿ ಅಭಿವ್ಯಕ್ತಿಗೊಳ್ಳಲು ಪ್ರೇರಣೆ ಒದಗಿಸಿತು. 'ದರ್ಶನಂ'ನಲ್ಲಿ


ಸೀತೆ ಅಗ್ನಿಚಿತೆಯನ್ನು ಪ್ರವೇಶಿಸುತ್ತಿದ್ದಂತೆ ತಟಕ್ಕನೆ ರಾಮನೂ ಅಗ್ನಿಚಿತೆಯನ್ನು ಪ್ರವೇಶಿಸುತ್ತಾನೆ. ಅನಂತರ ಇಬ್ಬರೂ ದಿವ್ಯತೇಜೋರೂಪಿಗಳಾಗಿ ಹೊರಬರುತ್ತಾರೆ. ವಿಭೀಷಣನ ಮಗಳು ಅನಲೆ, ರಾಮನ ಪಾದಗಳಿಗೆ ನಮಸ್ಕರಿಸಿ, 'ಪತಿವ್ರತೆಯನ್ನು ಅಗ್ನಿಪರೀಕ್ಷೆಗೆ ಒಡ್ಡುವುದಿರಲಿ, ರಾಮನನ್ನು ಪರೀಕ್ಷಿಸುವವರಾರು? ರಾಮನೇನು ದುರಿತ ದೋಷಕೆ ಹೊರತೆ?' ಎಂದುಕೊಂಡೆ. ಪೂಜ್ಯೆಯನ್ನು ಪಾಲಿಸುವ ನೆವದಿ ನೀನೂ ಪರೀಕ್ಷೆಗೆ ಒಳಗಾದೆ" ಎಂದು ಹೇಳುವ ಮಾತು, ಒಂದು ಸ್ತರದಲ್ಲಿ, ಸ್ತ್ರೀ ಸಂವೇದನೆಯನ್ನು ಬಿಂಬಿಸುತ್ತದೆ. ಅದೊಂದು ನೂತನ ಕಲ್ಪನೆಯೆ. ಇನ್ನೊಂದು ಸ್ತರದಲ್ಲಿ ಕವಿಯ ದಾರ್ಶನಿಕ ದೃಷ್ಟಿಯಿದೆ. ಕುವೆಂಪು ಅವರದು ವಾಲ್ಮೀಕಿ ರಾಮಾಯಣದ ಪುನರ್ ನಿರೂಪಣೆಯಲ್ಲ; ಅದೊಂದು ದರ್ಶನಕ್ಕೆ ಒಡ್ಡಿರುವ ಪ್ರತಿಮೆ. ಮಹಾಕಾವ್ಯದ ಮಾರ್ಗ ವಿಧಾನ ಅದು. ಸುರೇಖಾ ಅವರ ಎರಡು ಕಲಾಕೃತಿಗಳು ರಾಮಾಯಣ ದರ್ಶನದಲ್ಲಿ ಬರುವ ಅಗ್ನಿಪರೀಕ್ಷಾ ಪ್ರಸಂಗದ ದೃಶ್ಯಾತ್ಮಕ ವ್ಯಾಖ್ಯಾನವಾಗದೆ ಮೂಲಕೃತಿಯ ಕಥಾಪ್ರಸಂಗದ ವಾಸ್ತವಪ್ರಜ್ಞೆಯ ಬೇರೊಂದು ಪುನರ್‌ಸೃಷ್ಟಿಯೇ ಆಗುತ್ತದೆ. ನಗ್ನ ವಾಸ್ತವಕ್ಕೊಡ್ಡಿದ ಕಲಾಪ್ರತಿಮೆಯಾಗುತ್ತದೆ. ವಾಲ್ಮೀಕಿಯ ರಾಮ, ಕುವೆಂಪು ಅವರ ರಾಮನಿಗಿಂತ ಭಿನ್ನವಾದ ವಾಸ್ತವ ಜಗತ್ತಿನ ರಾಮ, ಈತ ಪುರುಷರಾಮ. ಜಗತ್ತು ಮಾಯೆ ಎಂದರು ಆಚಾರ್ಯರು. ಆದರೆ ನಾವು ಬದುಕಿರುವವರೆಗೆ ಅದು ಕಟುವಾಸ್ತವ. ಕುವೆಂಪು ಅವರೂ ಅದನ್ನು ಬಲ್ಲರು. ಅವರ ಕಾದಂಬರಿಗಳಲ್ಲಿ ಹೆಣ್ಣಿನ ದುರಂತ, ಹತ್ಯೆ, ಶೋಷಣೆ, ಅತ್ಯಾಚಾರಗಳನ್ನು ಚಿತ್ರಿಸಿದ್ದಾರೆ. 'ಕೆರೆಗೆಹಾರ'ದಂತಹ ಜನಪದ ಕಥನ ಕವನವನ್ನು ಪ್ರಸ್ತಾಪಿಸಿ, ಬಸುರಿಯನ್ನು ಬಲಿಗೊಟ್ಟರೆ ನೀರು ಬರುತ್ತದೆಯೆ ಎಂದು ಮೂಢನಂಬಿಕೆಯನ್ನು ಟೀಕಿಸಿದ್ದಾರೆ. (ಪ್ರಾಸಂಗಿಕವಾಗಿ ಉಲ್ಲೇಖಿಸ ಬಹುದು. ಸುರೇಖಾ ಅವರು 'ಕೆರೆಗೆಹಾರ'ವನ್ನು ಆಧರಿಸಿ - 'ಭಾಗೀರಥಿ' ಎಂಬ ವಿಡಿಯೊಚಿತ್ರ ನಿರ್ಮಿಸಿದ್ದಾರೆ. ಆಧುನಿಕ ಅನುಭವ-ಸಂವೇದನೆಗಳನ್ನು ಸಮೀಕರಿಸಿ ರಿಚುವಲ್ ಎಂಬಂತೆ ಒಂದು ರೂಪಕ ಸೃಷ್ಟಿಸಿದ್ದಾರೆ. ವಿಧಿಯಾಚರಣೆಗಳೂ ಹೇಗೆ ಹೆಣ್ಣಿನ ಶೋಷಣೆ, ದುರಂತಗಳಿಗೆ ಕಾರಣವಾಗುತ್ತವೆ ಎಂಬ ಧ್ವನಿ ಇದೆ.) ಕುವೆಂಪು ಅವರದು ಮಹಾಕಾವ್ಯ ದರ್ಶನ ಧ್ವನಿಗೆ, ಸಂರಚನೆಯ ಸಮಗ್ರದೃಷ್ಟಿಗೆ ಔಚಿತ್ಯಪೂರ್ಣವಾಗಿದೆ. ಸುರೇಖಾ ಅವರ ನಗ್ನವಾಸ್ತವ ಅನುಭವ ಪ್ರಪಂಚ, ಬೇರೆಯದೇ ದೃಶ್ಯಾತ್ಮಕ ಪ್ರತಿಮಾಸೃಷ್ಟಿಗೆ ಕಾರಣವಾಗಿದೆ.



ಕಲಾವಿದೆ ಸುರೇಖಾ ಅವರು ಎರಡು ಚಿತ್ರಗಳನ್ನು ರಚಿಸಿದ್ದಾರೆ. ಎರಡೂ ಚಿತ್ರಗಳು ಪರಸ್ಪರ ಪೂರಕವಾಗಿ ಒಂದು ಕಲಾಕೃತಿ ಎಂಬಂತಿವೆ. ಎರಡೂ ಕೊಲಾಜ್ ತಂತ್ರ ಅಳವಡಿಸಿದ ಮಿಶ್ರ ಮಾಧ್ಯಮದ ರಚನೆಗಳು. ಕೊಲಾಜ್ ತಂತ್ರ ಮತ್ತು ಶೈಲಿ ಫ್ರಾನ್ಸಿನ ಬ್ರಾಖ್ ಮತ್ತು ಪಿಕಾಸ್ ಅವರು ತಮ್ಮ ವೈವಿಧ್ಯಪೂರ್ಣ ಕಲಾರಚನೆಗಳ ಕಾಲಾವಧಿಯಲ್ಲಿ ಒಂದು ಅವಧಿಯಲ್ಲಿ ರೂಪಿಸಿದ ವಿಧಾನ ಮತ್ತು ಶೈಲಿ. ವರ್ಣಲೇಪನದೊಡನೆ ಅಥವಾ ಅದನ್ನು ಬಿಟ್ಟು ಪತ್ರಿಕಾ ತುಂಡುಗಳು, ಕಾಗದ, ಬಟ್ಟೆ, ಕಡ್ಡಿ ಇತ್ಯಾದಿ ಸಾಮಗ್ರಿಗಳನ್ನು ಅಂಟಿಸಿ ರಚಿಸುವ ವಿಧಾನ. ನಮ್ಮಲ್ಲಿ ವಿ. ಬಾಲು ಅವರು ಪೇಪರ್ ಕೊಲಾಜ್ ವಿಧಾನವನ್ನೆ ತಮ್ಮ ಕೃತಿರಚನಾ ವಿಧಾನವನ್ನಾಗಿಸಿಕೊಂಡಿದ್ದಾರೆ. ಅವರಲ್ಲಿ ಅದೊಂದು ತಂತ್ರ, ಶೈಲಿ. ಸುರೇಖಾ ವಿಧಾನದಲ್ಲಿ ಅದು ಸಂಜ್ಞೆಯೂ ಆಗಿ ಅರ್ಥಸಾಧ್ಯತೆಗೆ ಅವಕಾಶ ನೀಡುತ್ತದೆ. ಚಿತ್ರಪಟಕ್ಕೆ, ಕ್ಯಾನ್ವಾಸ್ ಆಗಿ, ಸೀರೆಯನ್ನೇ ಸೀರೆಯ ಅಂಚುಗಳನ್ನೇ ಬಳಸಿದ್ದಾರೆ. ಸೀರೆ ಎಂಬುದೇ ಹೆಣ್ಣಿನ ಸಂಕೇತವಾಗುತ್ತದೆ. ಮೊದಲನೆಯ ಚಿತ್ರದಲ್ಲಿ ಮೇಲೆ ಸೀರೆಯ ಅಂಚನ್ನು ಎಡದಿಂದ ಬಲತುದಿಯವರೆಗೆ ಅಂಟಿಸಿದೆ. ಅಂಚಿನಿಂದ ಕೆಳಕ್ಕೆ ಕೆಂಪು ಬಣ್ಣದ ವರ್ಷಧಾರೆ. ಕೆಂಪು-ರಕ್ತವರ್ಣವೂ ಸಾಂಕೇತಿಕ. ಕೆಳಗೆ ಅಂಚಿಗೆ ಬದಲು ಚಿನ್ನದ ಬಣ್ಣದ ಲೇಪ - ಅಗ್ನಿ ಜಿಹ್ವೆಯಂತೆ. ಗಮನಿಸಬೇಕು: ಕೆಳ ಬಲಭಾಗದಲ್ಲಿ ಒಂದು ಚೀಟಿ ಅಂಟಿಸಿದೆ. ಅದರ ಹಿನ್ನೆಲೆಯಲ್ಲಿ ಹೂವು ಹಿಡಿದ ಕೈಯ ರೇಖಾಕೃತಿ ಇದೆ. ಮಾರ್ದವತೆ, ಸೌಂದರ್ಯಗಳು ಹಿನ್ನೆಲೆಗೆ ಸರಿದಿರುವ ಸಂಕೇತ ವಾಗಬಹುದು ಅಥವಾ ಪೂಜನೀಯ ವಸ್ತು-ಭಾವನೆಯ ಸಂಕೇತ ವಾಗಬಹುದು. ಅದರ ಮೇಲೆ ಬರೆಹವಿದೆ. **"ಕುವೆಂಪುರವರ ಕ್ಷಮೆಯಾಚಿಸಿ, ಸೀತೆಯೊಡನೆ ಅಗ್ನಿಪ್ರವೇಶ ಮಾಡಿದ ನಿಮ್ಮ ರಾಮ ನಮ್ಮ ಸುತ್ತಮುತ್ತಲೂ ಕಾಣುತ್ತಿಲ್ಲ. May be I cannot reach your Rama - Surekha."**

ಹಾಗಾದರೆ ಏನನ್ನು ಕಾಣುತ್ತಿದ್ದೇವೆ? ಇಂದು ವಾಸ್ತವದಲ್ಲಿ ಕಾಣುತ್ತಿರುವುದರ ಸಾಂದ್ರರೂಪ ಕಲಾಕೃತಿ. ಕಲಾವಿದೆ ಬಳಸಿರುವ ಪರಿಕರ ಸಾಮಗ್ರಿಯೂ ದೇಶೀಯ ಹಾಗೂ ಪರಂಪರೆಯ ಸಂಕೇತ. ಸೀರೆ ಮತ್ತು ರಾಮ-ಸೀತೆಯರಿರುವ ಆಲಂಕಾರಿಕ ಅಂಚೂ ಸಹ ಸಾಂಕೇತಿಕ. ಪುರಾಣ-ಇತಿಹಾಸ, ಭೂತ-ವರ್ತಮಾನ ಕಾಲಗಳ ಅವಿಚ್ಛಿನ್ನ ಸಾತತ್ಯವೂ ಸೂಚಿತ ವಾಗುತ್ತದೆ. ಕೊಲಾಜ್ ತಂತ್ರವಿಧಾನ ವಾದ್ದರಿಂದ ಪತ್ರಿಕೆಯಿಂದ ಕತ್ತರಿಸಿದ ಶೀರ್ಷಿಕೆಗಳನ್ನೂ ಅಲ್ಲಲ್ಲಿ ಅಂಟಿಸಿದೆ.


ಚಿತ್ರ - 1



"Women set ablaze by Husband" "ಶೀಲ ಶಂಕಿಸಿದ ಪತಿಯಿಂದ ಪತ್ನಿಯ ಹತ್ಯೆ" "Name: ಲಕ್ಷ್ಮಿ, Date 27-7-01. Nature of death : Burns. Police Station : ಸುಬ್ರಹ್ಮಣ್ಯಪುರ. D.H. News." "Suspects wife's loyalty. Lecturer sets wife ablaze" ಇತ್ಯಾದಿ. ಸೀತೆ-ರಾಮರ ಚಿತ್ರದ ಅಭಿರಚನೆಯೇ ಅಂಚು. ಅದರಿಂದ ಕೆಳಕ್ಕೆ ರಕ್ತ ವರ್ಷಧಾರೆ. ಹೆಣ್ಣಿನ ಮೇಲಿನ ದೌರ್ಜನ್ಯ ರಾಮಾಯಣ ಕಾಲದಿಂದಲೂ ಸಾಗಿಬಂದಿದೆ. ಸೀಮೆಎಣ್ಣೆ, ಬೆಂಕಿಗಳಲ್ಲದೆ, ಆಸಿಡ್ ಎರಚುವುದೂ ಆಧುನಿಕ ಅಸ್ತ್ರವಾಗಿದೆ. ಕೆಳಮಧ್ಯದ ಬೆಂಕಿನಾಲಗೆಯೂ ಸಾಂಕೇತಿಕ. ಅಂದು ಸೀತೆಯ ಅಗ್ನಿಪ್ರವೇಶ, ಇಂದು ರೂಪ ಕನ್ವರಳ ಜೀವಂತ ದಹನ. ಸುಟ್ಟ ಸ್ಥಳದಲ್ಲಿ ಮಂದಿರ ಕಟ್ಟಿಸಿ, ಸ್ಮಾರಕ ಮಾಡಿ, ಮಹಾಸತಿ ಮಾಸತಿ ಮಾಸ್ತಿಯನ್ನಾಗಿ ಮಾಡಿ (ಮಾಸ್ತಿಕಲ್ಲುಗಳು ನೆನಪಾಗುತ್ತವೆ), ಪೂಜಿಸುವ ವಿಪರ್ಯಾಸವೂ ನಡೆಯುತ್ತಿದೆ. 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ'. ಎಂತಹ ಪೂಜೆ, ಯಾರು ರಮಿಸುವವರು?

ಎರಡನೆಯ ಚಿತ್ರ: ಮೊದಲ ಚಿತ್ರದ ರಕ್ತಧಾರೆ ಇಲ್ಲಿ ರಕ್ತದ ಬಲೆಯಾಗಿದೆ. ಪಟದ ಮೈದಾನದಲ್ಲಿ ಕೆಂಪು ಬಣ್ಣದ ಚೌಕಳಿಯಂತಹ ಬಲೆಯ ವಿನ್ಯಾಸವಿದೆ. ಬಲೆಯಂತಹ ಸಂಜ್ಞೆಯ ಬಳಕೆಯೂ ಅರ್ಥಪೂರ್ಣ. ಸೀರೆಯ ಮೇಲಂಚಿನಲ್ಲಿ ಅಂಚಿನ ಅಲಂಕಾರವಿಲ್ಲ. ಆದರೆ ಕೆಳ ಅಂಚಿನಲ್ಲಿ, ಮೂರು ಚಿತ್ರ ಸಾಲುಗಳು. ಒಂದರ ಕೆಳಗೆ ಒಂದರಂತೆ ಇವೆ. ಇವು ಅಭಿರಚನೆ, ಪ್ಯಾಟರ್ನ್. ಪುನರಾವರ್ತನ ಗೊಳ್ಳುವ ಚಿತ್ರಸಾಲು. ಒಂದನೆಯ ಸಾಲು ರಾಮ ಧನುರ್ಭಂಗ ಮಾಡುತ್ತಿರುವುದು, ಎಂದರೆ ಶೌರ್ಯ ಪ್ರದರ್ಶನದಿಂದ ಸೀತೆಯನ್ನು ಪಡೆದದ್ದು, ಉಡುಗೊರೆಯಾಗಿ ಪುಷ್ಪಮಾಲೆ ಹಿಡಿದ ಸೀತೆ. ಎಂದರೆ, ಹೆಣ್ಣು ಒಂದು ಉಡುಗೊರೆಯಾಗಿ ಕೊಡಬಹುದಾದ ವಸ್ತು, ಜಡವಸ್ತು, ವೀರಶುಲ್ಕ, ಪಣಕ್ಕೊಡ್ಡಿದ ವಸ್ತು ರತ್ನ, ಎನ್ನಿ.

ಅಂದು ಆ ಪದ್ಧತಿ, ಇಂದು ವರದಕ್ಷಿಣೆ. ಪೂರೈಸದಿದ್ದಲ್ಲಿ ಬೆಂಕಿ, ಹತ್ಯೆ, ಆತ್ಮಹತ್ಯೆ, ಸಾವು. ವರ್ತಮಾನದಲ್ಲಿ ಭೂತ(!) ಅಡಗಿದೆ ಎಂಬ ಮಾತು ನಿಜ. ಎರಡನೆಯ ಚಿತ್ರ ಸಾಲಿನ ಅಭಿರಚನೆ ಕೈಕೆ, ಮಂಥರೆಯರದು. ಒಬ್ಬಳು ನಲ್ಮೆಯ ರಾಣಿ, ಇನ್ನೊಬ್ಬಳು ದಾಸಿ. ರಾಣಿ-ಸೇವಕಿಯರಾದರೇನು, ಅರಮನೆ-ಗುಡಿಸಲ ಮನೆಯಾದರೇನು ಬವಣೆಗಳು ತಪ್ಪಿದ್ದಲ್ಲ. ಮೂರನೆಯ ಚಿತ್ರಸಾಲು ಪರಶುರಾಮ-ದಾಶರಥಿ ರಾಮರದು. ರಾಮ ಪತ್ನಿಯ ಶೀಲದ ಬಗ್ಗೆ ಶಂಕಿಸಿ (ಹಾಗೆ ಪ್ರಜಾಸಾಮಾನ್ಯರ ಅನಿಸಿಕೆ ಎಂದು) ಬೆಂಕಿಗೊಡ್ಡಿದರೆ, ಪರಶುರಾಮ ಹೆತ್ತ ತಾಯಿಯನ್ನೇ (ತಂದೆಯ ಆಜ್ಞಾಪಾಲನೆ ಎಂದು) ಹತ್ಯೆಗೈದ. ಪುರುಷರಾಮ-ಪರಶುರಾಮರ ಅಭಿರಚನೆಯ ಬಗೆಯಿದು. ಚಿತ್ರರಚನೆಯ ಭಾಗವಾಗಿ ಸಂಯೋಜನೆಯಲ್ಲಿ ಇಲ್ಲೂ ಪತ್ರಿಕೆಗಳ ಕಟಿಂಗ್‌ಗಳನ್ನು ಅಂಟಿಸಿದೆ. ಹೀಗೆ ರೂಪಿಕೆಗಳೂ ಸಮಗ್ರ ಕಲ್ಪನೆಯ ಸುಸಂಗತ ಭಾಗಗಳಾಗುತ್ತವೆ. ಪುರಾಣಕಾಲದಿಂದ ಇಂದಿನವರೆಗಿನ ಹೆಣ್ಣಿನ ಶೋಷಣೆ-ಬವಣೆಗಳು ಕಲಾಪ್ರತಿಮೆಯಾಗಿ ರೂಪತಳೆದಿವೆ. ಇದು ಕುವೆಂಪು ಕಾವ್ಯ ಪ್ರಸಂಗಕ್ಕೆ ಪ್ರತಿಕ್ರಿಯೆಯಾಗಿ ಮಾತ್ರವೇ ರೂಪುಗೊಂಡಿಲ್ಲ, ಸ್ವತಂತ್ರ ಕಲಾಕೃತಿಗಳೇ ಆಗುತ್ತವೆ.

ಕುವೆಂಪು ಅವರದು ಆಧ್ಯಾತ್ಮಿಕತೆಯ ದರ್ಶನ ಪ್ರತಿಮೆಯಾದರೆ ಕಲಾವಿದೆ ಸುರೇಖಾ ಅವರದು ಸೂಕ್ಷ್ಮ ಸಂವೇದನೆ ಹಾಗೂ ಕಟುವಾಸ್ತವಗಳಿಗೆ ಒಡ್ಡಿದ ಕಲಾಪ್ರತಿಮೆಯಾಗುತ್ತದೆ. ಆಧುನಿಕ ಕಾಲದ ಅನುಭವ ಹಾಗೂ ವೈಚಾರಿಕ ದೃಷ್ಟಿಗೆ ಪುರಾಣ ವಸ್ತುವೂ ಒಂದು ಪ್ರತಿಮೆಯಾಗಿ ಹಲವು ಸ್ತರಗಳಲ್ಲಿ ಅರ್ಥವತ್ತಾಗುತ್ತದೆ. ರಾಜಾ ರವಿವರ್ಮನ ಕಾಲದ ಸಾಮಾಜಿಕ-ಸಾಂಸ್ಕೃತಿಕ ಹಿನ್ನೆಲೆ ಬೇರೆ, ವರ್ತಮಾನ ಕಾಲದ ಸಾಮಾಜಿಕ ಮೌಲ್ಯ ದೃಷ್ಟಿಯೇ ಬೇರೆ. ಸಾಮಾಜಿಕ ಮೌಲ್ಯಗಳು ಕಾಲಬದ್ಧ, ಬದಲಾಗಬಲ್ಲುವು. ಆದರೆ ಮಾನವೀಯ ಮೌಲ್ಯ ಕಾಲ-ದೇಶಾತೀತವಾದುದು. ಪುರಾಣ ವಸ್ತು ಒಂದು ಜನಾಂಗ, ಸಮಾಜದ ಕಾಲಕ್ಕೆ ಬದ್ಧವಾದರೂ ಅದರ ನಿರ್ವಹಣೆಯಲ್ಲಿ ಹೊರಡುವ ಧ್ವನಿಗಳು ಎಲ್ಲ ಸಮಾಜಗಳಿಗೂ ಅನ್ವಯಿಸುವಂತಹವು. ಹೆಣ್ಣಿನ ಬವಣೆ ಆ ಬಗೆಯದು. ರವಿವರ್ಮನ ಪ್ರತಿಪಾದನಾತ್ಮಕ ರಚನೆಗಳು ಆಕರ್ಷಕ, ವೈಭವೀಕೃತವಾದರೆ ಸುರೇಖ ಅವರ ಈ ಕೃತಿಗಳು ಪ್ರತೀಕಾತ್ಮಕ, ಸೂಚ್ಯ, ಅಭಿವ್ಯಕ್ತಿ ಪ್ರಧಾನವಾದುವು.

ಕಲಾವಿದೆ ಸುರೇಖಾ ಅವರು ಆರ್.ಎಂ. ಹಡಪದರ ಶಿಷ್ಯೆ. ಕೆನ್ ಕಲಾಶಾಲೆ, ಅನಂತರ ಶಾಂತಿನಿಕೇತನದಲ್ಲಿ ಕಲಾಭ್ಯಾಸ ಮಾಡಿದವರು. ಪ್ರಯೋಗ ಕಲೆಯನ್ನೂ ಕರಗತಮಾಡಿಕೊಂಡಿದ್ದಾರೆ. ದೇಶವಿದೇಶಗಳಲ್ಲಿ ಪ್ರವಾಸ ಮಾಡಿ ಕಲಾಕೃತಿಗಳನ್ನು ಪ್ರದರ್ಶಿಸಿರುವುದಲ್ಲದೆ, ಉಪನ್ಯಾಸಗಳನ್ನೂ ನೀಡಿದ್ದಾರೆ. ಇತ್ತೀಚೆಗೆ ವಿಡಿಯೊ ಸ್ಥಾಪನಾಕಲೆಯ ಪ್ರದರ್ಶನವನ್ನು - ಅರ್ಬನ್ ಹೀರೋಯಿನ್ಸ್- ಏರ್ಪಡಿಸಿದ್ದರು. ಅದೊಂದು ಹೊಸ ಬಗೆಯ ಕಲಾಪ್ರದರ್ಶನವಾಗಿತ್ತು.

(ತಿದ್ದುಪಡಿ : ಆಗಸ್ಟ್ ತಿಂಗಳ ಸ್ವಾತಂತ್ರ್ಯೋತ್ಸವ ವಿಶೇಷ ಸಂಚಿಕೆಯ 'ಕಲಾ ಇತಿಹಾಸ ಮತ್ತು ಸ್ತ್ರೀ ಸಂವೇದನೆ' ಲೇಖನದ ಪು. 26, 2ನೇ ಪ್ಯಾರದ ನಾಲ್ಕನೇ ಸಾಲಿನಲ್ಲಿ 'ಕಿಲ್ಲಿಂಗ್ ಮೆನ್ ಅಂಡ್ ಡೈಯಿಂಗ್ ವಿಮೆನ್' ಎಂಬುದು 'ಕಲಿಂಗ್ ಮೆನ್ ಅಂಡ್ ಡೈಯಿಂಗ್ ಮೆನ್' ಎಂದು ತಪ್ಪಾಗಿ ಮುದ್ರಿತವಾಗಿದೆ. ಇದಕ್ಕಾಗಿ ವಿಷಾದಿಸುತ್ತೇವೆ. – ಸಂ.) ☼




"...ನಮ್ಮ ನೆಂಟನೇ ಒಬ್ಬನು ಎಪ್ಪತ್ತು ವರ್ಷದವನು ಸತ್ತು ಹೋದನು. ಆತನ ಮೂರನೆಯ ಹೆಂಡತಿ ಇನ್ನೂ ದೊಡ್ಡವಳಾಗಿರಲಿಲ್ಲ. ಆಗ ಅವಳಿಗೆ ಸುಮಾರು ಏಳು ವರುಷ. ಗಂಡನು ಸತ್ತು ಹೋದರೆ ಚೆನ್ನಾಗಿ ಅಳುವುದಕ್ಕೂ ಅವಳಿಗೆ ತಿಳಿಯದು.... ಗಂಡನು ಸತ್ತು ಹೋದಾಗ ಆ ಹುಡುಗಿ ಬೀದಿಯಲ್ಲಿ ಆಡುತ್ತಿದ್ದಳು. ಶ್ರೋತ್ರೀಯನಾದ ಅವಳ ತಂದೆ ಅವಳನ್ನು ಎತ್ತಿಕೊಂಡು ಒಳಗೆ ಹೋಗಿ 'ಅಮ್ಮ ನೀನು ಸಹಗಮನ ಮಾಡಿದರೆ ಯಾವಾಗಲೂ ಸ್ವರ್ಗದಲ್ಲಿ ಗಂಡನೊಂದಿಗೆ ಸುಖಪಡಬಹುದು ಮತ್ತು ಗಂಡನ ವಂಶದವರನ್ನೂ ನಿನ್ನ ತಂದೆಯ ಕುಲದವರನ್ನೂ ಉದ್ಧಾರ ಮಾಡಬಹುದು' ಎಂದನು. ಆ ಹುಡುಗಿ ಸಹಗಮನವೆಂದರೇನೆಂದು ತಿಳಿಯದೆ ಆಗಲೆಂದು ಒಪ್ಪಿಕೊಂಡಳು. ಹುಡುಗಿಗೆ ಮೈತುಂಬ ಒಡವೆಗಳನ್ನು ಇಡಿಸಿ, ಒಳ್ಳೆಯ ಸೀರೆ ಉಡಿಸಿ ಮದುವಣಗಿತ್ತಿಯಂತೆ ಸಿಂಗರಿಸಿ, ಬಾಜಾಬಜಂತ್ರಿಯೊಂದಿಗೆ ಶವದೊಂದಿಗೆ ಮೆರವಣಿಗೆಯಲ್ಲಿ ಗೋದಾವರೀ ತೀರಕ್ಕೆ ತೆಗೆದುಕೊಂಡು ಹೋದರು. ಅದನ್ನು ನೋಡಲು ಸಾವಿರಾರು ಮಂದಿ ಹೋದರು. ಅರಿಸಿನ ಕುಂಕುಮ ತೆಗೆದುಕೊಳ್ಳಲು ಊರ ಮುತ್ತೈದೆಯರು ಹೋದರು. ಬ್ರಾಹ್ಮಣರು ಗಂಡನ ತಲೆಯನ್ನು ಆ ಹುಡುಗಿಯ ತಲೆಯ ಮೇಲೆ ಇರಿಸಿ ಮಂತ್ರ ಹೇಳುತ್ತಾ ಕರ್ಮ ಮಾಡಿಸಿದರು. ಹುಡುಗಿಯ ತಂದೆ ಹುಡುಗಿ ತೊಟ್ಟ ಒಡವೆಗಳನ್ನೆಲ್ಲ ತೆಗೆಸಿ ಬ್ರಾಹ್ಮಣರಿಗೆ ಹಂಚಿದನು..... ಜನ್ಮಾಂತರಗಳಲ್ಲಿಯೂ ಮುತ್ತೈದೆತನ ಬರುವುದೆಂದು ಆಗ ಅರಿಸಿನ ಕುಂಕುಮಗಳನ್ನು ನಾನೂ ತೆಗೆದುಕೊಂಡೆನು. ಬ್ರಾಹ್ಮಣರು ಹುಡುಗಿಯನ್ನು ಚಿತೆಯ ಮೇಲೆ ಆಕೆಯ ಗಂಡನ ಮಗ್ಗುಲಲ್ಲಿ ಮಲಗಿಸಿ ಮಂತ್ರ ಹೇಳುತ್ತಿದ್ದರು. ಆಗ ತಂದೆಯೇ ಇರಬಹುದು, ನಾಲ್ಕು ಕಡೆಯೂ ಬೆಂಕಿ ಹೊತ್ತಿಸುವಾಗ್ಯೆ.... ಮೈಗೆ ಉರಿ ಸೋಂಕಿ ದೊಡನೆಯೇ ಆ ಹುಡುಗಿ ಕಿರ್ರೆಂದು ಗಟ್ಟಿಯಾಗಿ ಅರಚಿಕೊಂಡು ಬೆಚ್ಚಿಬಿದ್ದು ಅಳುತ್ತಾ ಕೆಳಗೆ ಧುಮುಕಿದಳು. ಆಗ ತಂದೆ ಅವಳನ್ನು ಬ್ಯೆಯ್ದು.... ಪ್ರಾಯಶ್ಚಿತ್ತ ಮಾಡಿಸಿ ಪುನಃ ಚಿತೆಯ ಮೇಲೆ ಮಲಗಿಸಿದರು. ಅವಳು ಪುನಃ ಎದ್ದು ಬಾರದಂತೆ ಬ್ರಾಹ್ಮಣರು ಬಿದಿರುಕಡ್ಡಿಗಳಲ್ಲಿ ಗಟ್ಟಿಯಾಗಿ ಅಮುಕಿ ಹಿಡಿದುಕೊಂಡು, ಅಳುವ ಶಬ್ದ ಕೇಳಿಸದಂತೆ ವಾದ್ಯಗಳನ್ನು ಬಾಜಿಸಲು ಹೇಳಿ ವೇದ ಮಂತ್ರಗಳನ್ನು ಗಟ್ಟಿಯಾಗಿ ಹೇಳುತ್ತಾ ನಿಮಿಷದೊಳಗಾಗಿ ದಹನ ಮಾಡಿಸಿದರು...."

(ಯು. ಮಹೇಶ್ವರಿ ಅವರು ರಚಿಸಿರುವ 'ಇದು ಮಾನುಷಿಯ ಓದು' ಕೃತಿಯಲ್ಲಿ, 1897ರಲ್ಲಿ ಪ್ರಕಟವಾಗಿದ್ದ 'ಸತ್ಯವತೀ ಚರಿತ್ರೆ'ಯಿಂದ ಈ ಆಯ್ದ ಭಾಗವನ್ನು ಪ್ರಕಟಿಸಿದ್ದಾರೆ. ಸಹಗಮನದ ಪ್ರತ್ಯಕ್ಷದರ್ಶಿ ಪಾರ್ವತಿ ಎಂಬಾಕೆಯನ್ನು ಸಂದರ್ಶಿಸಿದ ಭಾಗ. ಪಾರ್ವತಿ ಅವರು ಸಹಗಮನವನ್ನು ನೋಡಲಾಗದೆ ಮೂರ್ಛೆಬಿದ್ದೆದ್ದು ಮನೆಗೆ ಓಡಿ ಹೋಗಿದ್ದರಂತೆ.)

ಚಪ್ಪಲಿಗಳು

ನನ್ನ ಪಾದಗಳ ಆಚೆಗೆ
ಏನೆಲ್ಲಾ ಹರಡಿದೆ
ಕೆಸರು, ಹೊಲಸು, ಚಿಂದಿಗೆದ್ದ ಎಷ್ಟೋ ವಸ್ತುಗಳು
ನನ್ನ ಪಾದಗಳ ಕಾಪಿಡುತ
ಶ್ರದ್ಧೆಯಿಂದ ಅಪ್ಪಿಕೊಳ್ಳುತ್ತಿವೆ.
ಒಂದೇ ಒಂದು ಎಳೆ ಕಸೂತಿಯೂ ಇಲ್ಲದ
ಒರಟಾದ ಚಪ್ಪಲಿ.
ಅದೂ ಅಲ್ಲಲ್ಲಿ ಹರಿದಿದೆ
ತೇಪೆಯಿಟ್ಟು ಇಟ್ಟು ನನಗೂ ಸುಸ್ತಾಗಿದೆ.
ಇನ್ನೊಂದು ಇದೇ ಬಗೆಯ ಚಪ್ಪಲಿ
ಬೇಕೆಂಬುದು ನನ್ನ ಹಠ
ಆದರದು ಸಿಗುತ್ತಿಲ್ಲ.
ಹಿಮ್ಮಡಿಯ ತಳಕ್ಕೆ
ಮೊಳೆಯ ಹೊಡೆಸಿ ಹರಿದಿದ್ದ ಜಾಗವ ಮುಚ್ಚಿಸಿದೆ
ಕಿತ್ತ ಉಂಗುಷ್ಟಕ್ಕೆ ಒಂದಿಷ್ಟು ಹೊಲಿಗೆ
ನಾಬಿಟ್ಟ ಚಪ್ಪಲಿಯ ನೋಡೇ
ನೀನೇ ಬಂದಿದ್ದು ಅಂತ ಗೊತ್ತಾಯ್ತು ಅನ್ನುತ್ತದೆ ಜಗತ್ತು
ಈ ಬಗೆಯ ಚಪ್ಪಲಿಯ ಜಗತ್ತಿನಲ್ಲಿ ಯಾರೂ ಹಾಕಲಾರರು
ಈ ಬಗೆಯ ಚಪ್ಪಲಿ ಕೂಡಾ ಎಲ್ಲೂ ಇರಲಾರದು.
ಇವರು ದೇವರ ಜೋಡು ಹೊಲಿಯುವವರು
ಈ ಚಪ್ಪಲಿ ಮಾಡಿಕೊಟ್ಟದ್ದು ಇವರೇ
ನಾನು ಹೊಲಿದು ತಂದಿದ್ದು ಇವರಿಂದಲೇ
ನನಗೆ ಚಪ್ಪಲಿ ತಂದುಕೊಟ್ಟವ ಹೇಳಿದ.

ಆದರೆ ಈಗ ಅವರಿಗೆ ಕಣ್ಣು ಕಾಣುವುದಿಲ್ಲ.
ಚಪ್ಪಲಿ ಹೊಲಿಯುವುದಿಲ್ಲ.
ದೇಶ ತಿರುಗಿದೆ
ಕೋಶ ಓದಿದೆ
ಎಲ್ಲೂ ಇಲ್ಲ ಈ ಬಗೆಯ ಚಪ್ಪಲಿ
ನನ್ನ ಚರ್ಮದ ಜೊತೆ ಚರ್ಮವಾಗಿ
ಅಂಟಿ ಹೋಗಿ
ದೇಹಕ್ಕೆ ಒಂದಾಗಿದೆ
ಈಗನ್ನಿಸುತ್ತಿದೆ ಜೀವವಿರುವವರೆಗೂ
ತೇಪೆಗೇನೂ ಕೊರತೆ ಇಲ್ಲ
ಇರಲಿ ಇದೇ ಚಪ್ಪಲಿ ಕಡೆಯವರೆಗೂ
ಪಾದ ಸವೆವವರೆಗೂ
ಜೀವ ಇರುವವರೆಗೂ



■ *ಡಾ. ಚಂದ್ರಿಕಾ*

ಮೀಸಲು ಮಸೂದೆ : ಬದಲಾವಣೆಯ ಮಂತ್ರದಂಡವಲ್ಲ

● ಸಿ.ಜಿ. ಮಂಜುಳಾ

ಕಳೆದ ಹಲವು ದಶಕಗಳಲ್ಲಿ ಸಮಾಜದಲ್ಲಿ ಹಲವು ದೀರ್ಘಕಾಲೀನ ಬದಲಾವಣೆಗಳಿಗೆ, ಪರಿವರ್ತನೆಗಳಿಗೆ ಮಹಿಳಾ ಚಳವಳಿ ಕಾರಣವಾಗಿದೆ. ಹೀಗಿದ್ದೂ ಪಿತೃಪ್ರಧಾನ ಮೌಲ್ಯಗಳು ಸಾಮಾಜಿಕ ಹಂದರದಲ್ಲೇ ಹಾಸುಹೊಕ್ಕಾಗಿವೆ. ಹೀಗಾಗಿಯೇ ನೀತಿಗಳನ್ನು ರೂಪಿಸುವಂತಹ ರಾಜಕೀಯ ಕ್ಷೇತ್ರದಲ್ಲಿ ಮಹಿಳಾ ಪ್ರಾತಿನಿಧ್ಯ ಸೊರಗಿದೆ. ಮಹಿಳಾ ಮೀಸಲು ಮಸೂದೆ ಕುರಿತಂತೆ ದಶಕಗಳಿಂದ ಚರ್ಚೆಗಳು ನಡೆಯುತ್ತಲೇ ಇವೆ. ಮಹಿಳಾ ಚಳವಳಿ ಎದುರಿಸುತ್ತಿರುವ ಸವಾಲುಗಳನ್ನು ಅರಿತುಕೊಳ್ಳಲು ರಾಜಕೀಯ ವಲಯದಲ್ಲಿ ಮಹಿಳೆಯ ಪಾಲ್ಗೊಳ್ಳುವಿಕೆಯ ವಿಚಾರದ ಅವಲೋಕನ ಇಲ್ಲಿದೆ.

ರಾಷ್ಟ್ರದ 60ನೇ ಸ್ವಾತಂತ್ರ್ಯೋತ್ಸವದ ಸಂದರ್ಭಕ್ಕೆ ಮೊದಲ ಬಾರಿಗೆ ಮಹಿಳೆಯೊಬ್ಬರು ರಾಷ್ಟ್ರಾಧ್ಯಕ್ಷೆಯಾಗಿ ಆಯ್ಕೆಯಾಗಿದ್ದಾರೆ. ಆದರೆ ಆ ಮೂಲಕ ಮಹಿಳೆಗೆ ರಾಜಕೀಯ ಸ್ವಾತಂತ್ರ್ಯ ಲಭಿಸಿದಂತೇನೂ ಅಲ್ಲ. ಪಕ್ಷ ರಾಜಕಾರಣದ ಹಲ ಬಗೆಯ ಒತ್ತಡಗಳಲ್ಲಿ ಅಂತೂ ಮಹಿಳೆಯೊಬ್ಬರು ರಾಷ್ಟ್ರದ ಅತ್ಯುನ್ನತ ಹುದ್ದೆ ಅಲಂಕರಿಸಿದ್ದಾರೆ.

ಕಳೆದ ಮೂರು ದಶಕಗಳ ಮಹಿಳಾ ಚಳವಳಿಯ ಹಲ ಬಗೆಯ ಒತ್ತಡಗಳಲ್ಲಿ ಅನೇಕ ಮಹಿಳಾ ಪರ ಶಾಸನಗಳು ರಾಜಕೀಯ ಮಟ್ಟದಲ್ಲಿ ಅಂಗೀಕಾರವಾಗಿವೆ. ಹಲವು ಕಾನೂನುಗಳ ಬದಲಾವಣೆಗೆ, ಹೊಸ ಶಾಸನಗಳಿಗೆ ಪ್ರೇರಕವಾದ ಮಹಿಳಾ ಚಳವಳಿಯ ಗಮನ ಈಗ ಶಾಸನಸಭೆಗಳು ಹಾಗೂ ರಾಜಕೀಯ ನಿರ್ಧಾರಗಳನ್ನು ಮಾಡುವ ಪ್ರಕ್ರಿಯೆಗಳಲ್ಲಿ ಮಹಿಳೆಯರ ಹೆಚ್ಚಿನ ಪಾಲ್ಗೊಳ್ಳುವಿಕೆಗೆ ಪೂರಕವಾದ ಚಟುವಟಿಕೆಗಳತ್ತ ಹರಿದಿದೆ. ಆದರೆ 80ರ ದಶಕದಲ್ಲಿ ಮಹಿಳಾ ವಿಚಾರಗಳಿಗೆ ಸಂಬಂಧಿಸಿದಂತೆ ಗೋಚರವಾಗುತ್ತಿದ್ದ ಏಕತೆ ಈ ರಾಜಕೀಯ ವಿಚಾರಗಳನ್ನು ಕುರಿತಂತೆ ಒಡಮೂಡುತ್ತಿಲ್ಲ. ಸಂಸತ್ ಹಾಗೂ ಶಾಸನಸಭೆಗಳಲ್ಲಿ ಮಹಿಳಾ ಮೀಸಲಿಗೆ ಸಂಬಂಧಿಸಿದ ವಿಚಾರದಲ್ಲಿ ಚಳವಳಿಯಲ್ಲಿ ಭಿನ್ನ ಧ್ವನಿಗಳು ಕೇಳಿ ಬಂದಿದ್ದು ನಿಜ.

ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮೂರನೇ ಒಂದರಷ್ಟು ಸ್ಥಾನಗಳನ್ನು ಮೀಸಲಿಡುವ ಸಂವಿಧಾನದ 81 ನೇ ತಿದ್ದುಪಡಿ ಮಸೂದೆಯನ್ನು 1996 ರ ಸೆಪ್ಟೆಂಬರ್‌ನಲ್ಲಿ ಸಂಯುಕ್ತ ರಂಗ ಸರ್ಕಾರ ಮಂಡಿಸಿತು. ಆ ಹಿಂದೆ ನಡೆದಿದ್ದ ಚುನಾವಣೆಯಲ್ಲಿ ಬಹುತೇಕ ಎಲ್ಲ ರಾಜಕೀಯ ಪಕ್ಷಗಳೂ ತಮ್ಮ ಪ್ರಣಾಳಿಕೆಗಳಲ್ಲಿ ಈ ಬಗ್ಗೆ ವಚನವನ್ನೂ ನೀಡಿದ್ದವು. ಈ ಮಸೂದೆಯನ್ನು ಸಿಪಿಐ ನ ಸಂಸತ್ ಸದಸ್ಯೆ (ಎಂಪಿ) ಗೀತಾ ಮುಖರ್ಜಿ ಅಧ್ಯಕ್ಷತೆಯ ಜಂಟಿ ಆಯ್ಕೆ ಸಮಿತಿಯ ಪರಿಶೀಲನೆಗೆ ಒಪ್ಪಿಸಲಾಯಿತು. ಅನಂತರ ಮರುಸಲ್ಲಿಸಲಾದ ಮಸೂದೆ 1997 ಹಾಗೂ 1998ರಲ್ಲಿ ಸದನದಲ್ಲಿ ಭಾರಿ ಚರ್ಚೆಗೊಳಗಾಯಿತು. ಆಗಿನಿಂದಲೂ ಮಸೂದೆಯನ್ನು ತಡೆಹಿಡಿಯಲಾಗಿದೆ. ಪ್ರತಿ ಬಾರಿ ಸಂಸತ್ ಅಧಿವೇಶನ ನಡೆದಾಗಲೂ ಈ ವಿಚಾರ ಕಾರ್ಯಸೂಚಿಯಲ್ಲಿರುತ್ತದೆ. ಆದರೆ ಸದ್ಯದ ರಾಜಕೀಯ ಅಸ್ಥಿರತೆಯ ಸನ್ನಿವೇಶಗಳಲ್ಲಿ ಯಾವ ರಾಜಕೀಯ ಪಕ್ಷವೂ ಈ ವಿವಾದಾತ್ಮಕ ಮಸೂದೆ ಮಂಡನೆಯನ್ನು ಕೈಗೆತ್ತಿಕೊಳ್ಳುತ್ತಿಲ್ಲ.

1990ರ ದಶಕದ ಮಾತು. ಆಗ ಸಬಲೀಕರಣ ಎಂಬುದು ಎಲ್ಲೆಲ್ಲೂ ಕೇಳುವ ನುಡಿಯಾಗಿತ್ತು. ಬೀನಾ ಅಗರವಾಲ್ ಅವರ ಪ್ರಕಾರ, ಸಬಲೀಕರಣ ಎಂಬುದು 'ತಮ್ಮನ್ನು ಅಧೀನ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ನೆಲೆಗಳಲ್ಲಿರಿಸುವ ಅಸ್ತಿತ್ವದಲ್ಲಿರುವ ಅಧಿಕಾರ ಸಂಬಂಧಗಳಿಗೆ ಸವಾಲೆಸೆಯುವ ಹಾಗೂ ಬದಲಿಸುವ ರೀತಿಯಲ್ಲಿ ದುರ್ಬಲ (ಅಧಿಕಾರ ರಹಿತರ) ವ್ಯಕ್ತಿಗಳು ಹಾಗೂ ಗುಂಪುಗಳ ಸಾಮರ್ಥ್ಯ ಹೆಚ್ಚಿಸುವ ಪ್ರಕ್ರಿಯೆ'.

ಈ ಹಿಂದೆಲ್ಲಾ ಹೆಣ್ಣು ಬಲಿಪಶುವಾಗುವ (ವಿಕ್ಟಿಮೈಸೇಷನ್) ವಿಚಾರದ ಬಗ್ಗೆ ಒತ್ತು ಇರುತ್ತಿತ್ತು. ಇದಕ್ಕೆ ಪೋಸ್ಟ್ ಫೆಮಿನಿಸ್ಟ್ ಪ್ರತಿಕ್ರಿಯೆಯಾಗಿ 'ಅಧಿಕಾರದ' ಮೇಲೆ ಒತ್ತು ಹೆಚ್ಚಾಯಿತು. ಆದರೆ ಸಬಲೀಕರಣದ ನುಡಿಯ ಯದ್ವಾತದ್ವಾ ಬಳಕೆ, ಅದರ ಸಾಮರ್ಥ್ಯವನ್ನು ಕುಂದಿಸಿ ತೆಳುವಾಗಿಸುವ ಸಾಧ್ಯತೆ ಇರುತ್ತದೆ.

ಈ ಬಗ್ಗೆ ದೇವಕಿ ಜೈನ್ ಹೇಳುವುದು ಹೀಗೆ **'ಶಿಕ್ಷಣ, ಉತ್ತಮ ಆರೋಗ್ಯ ಅಥವಾ ಶೌಚ ಸೌಲಭ್ಯಗಳು ಸಬಲೀಕರಣದ ಹಾದಿ ಎಂದು ಹೇಳಿದಲ್ಲಿ...ಅದು ಪದದ ಅಪಬಳಕೆ ಹಾಗೂ ನೀತಿಯನ್ನು ತಪ್ಪಾಗಿ ಅರ್ಥೈಸುವುದಾಗುತ್ತದೆ'.**


ಶೌಚ ಗೃಹಗಳು ತಂತಾನೇ ಸಬಲೀಕರಣದ್ದಲ್ಲ. ಆದರೆ ಕೆಲವೊಂದು ಗುಂಪುಗಳ ಅಧಿಕಾರ ಚಲಾಯಿಸುವಿಕೆಯಿಂದಾಗಿ ಬಹುತೇಕ ಜನರಿಗೆ ಶೌಚಗೃಹದಂತಹ ಮೂಲ ಸೌಕರ್ಯಗಳೂ ದಕ್ಕಿರದೇ ಹೋಗಿರ ಬಹುದು. ಹೀಗಾಗಿ ಇಂತಹ ಸೌಲಭ್ಯಗಳನ್ನು ನೀಡಲು ಪ್ರತಿಪಾದಿಸುವ ರೀತಿಯಲ್ಲಿ ದುರ್ಬಲವರ್ಗಗಳನ್ನು ಸಬಲೀಕರಿಸುವ ಗುರಿ ಇರಬೇಕು.

ಸಬಲೀಕರಣ ಎಂಬುದು ಅಧಿಕಾರ. ಅಧಿಕಾರದ ಅನುಸಂಧಾನ ಇರುವ ಕ್ಷೇತ್ರ ರಾಜಕೀಯ. ಸಬಲೀಕರಣವನ್ನು ಸಾಧಿಸಲು ಮಹಿಳಾ ಚಳವಳಿ ರಾಜಕೀಯ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಈ ಕ್ಷೇತ್ರವನ್ನು ಮಹಿಳಾ ಚಳವಳಿ ಪುನರ್ ವ್ಯಾಖ್ಯಾನಿಸಿದ ರೀತಿಯಲ್ಲಷ್ಟೇ ಅಲ್ಲ (ವೈಯಕ್ತಿಕವಾದದ್ದು ರಾಜಕೀಯವಾದದ್ದು – ಪರ್ಸನಲ್ ಈಸ್ ಪೊಲಿಟಿಕಲ್). ಅಧಿಕಾರದ ವಹಿವಾಟು ನಡೆಯುವ ಔಪಚಾರಿಕ ಸಾಂಸ್ಥಿಕ ರಾಜಕಾರಣದ ಸಾರ್ವಜನಿಕ ಜಗತ್ತಿನಲ್ಲೂ ಕಾರ್ಯ ನಿರ್ವಹಿಸ ಬೇಕಾಗುತ್ತದೆ.


ಭಾರತದಲ್ಲಿ ಶಾಸನಸಭೆಗಳಲ್ಲಿ ಮೀಸಲು ಸ್ಥಾನಗಳಿಗೆ ಬೇಡಿಕೆ ಮಹಿಳಾ ಚಳವಳಿಯಿಂದ ಮೂಡಿ ಬರಲಿಲ್ಲ. ಆದರೆ ಚಳವಳಿಯ ಒಂದುವರ್ಗ ಅದನ್ನು ಕೈಗೆತ್ತಿಕೊಂಡಂತಹ ತ್ವರಿತತೆ ಅದರ ಸಬಲೀಕರಣದ ಗ್ರಹಿಕೆಯನ್ನು ಪ್ರತಿಬಿಂಬಿಸುತ್ತದೆ. 1980ರ ದಶಕದ ಅನಂತರ ಕೈಗೊಂಡ ಮಹತ್ವದಹೆಜ್ಜೆ ಇದು; ಪ್ರತಿಭಟನಾ ರಾಜಕೀಯದಿಂದ ರಾಜಕೀಯ ಮುಖ್ಯವಾಹಿನಿಗೆ ಸಾಗುವ ಹಾದಿ ಇದು. ಸಮಾಜ ಹಾಗೂ ರಾಜಕೀಯದಲ್ಲಿ ಪರಿವರ್ತನಾ ಪಾತ್ರ

ವಹಿಸುವ ಚಳವಳಿಯ ಪ್ರತಿಪಾದನೆಗಳನ್ನು ವಾಸ್ತವದ ನೆಲೆಗೆ ತರುವಂತಹ ಪ್ರಯತ್ನ.

ಜೊತೆಗೇ ಈ ದಿಸೆಯಲ್ಲಿ ಜಾಗೃತಿಯೂ ಹೆಚ್ಚುತ್ತಿದೆ. ಸರ್ಕಾರಗಳು ಮುಖ್ಯವಾಗುವುದರಿಂದ ಮಹಿಳೆಯರು ಸರ್ಕಾರದ ಭಾಗವಾಗಬೇಕು ಎಂಬಂತಹ ಎಚ್ಚರವೂ ಹೆಚ್ಚುತ್ತಿದೆ. ಈ ಒಂದು ಎಚ್ಚರ ಬೀಜಿಂಗ್ ನಲ್ಲಿ 1995 ರಲ್ಲಿ ನಡೆದ ನಾಲ್ಕನೇ ವಿಶ್ವ ಮಹಿಳಾ ಸಮ್ಮೇಳನದಲ್ಲೇ ರೂಪಿಸಿದ ಕ್ರಿಯಾ ಯೋಜನಾ ವೇದಿಕೆ (ಪ್ಲಾಟ್‌ಫಾರಂ ಫಾರ್ ಆಕ್ಷನ್) ಯಲ್ಲೇ ಪ್ರತಿಬಿಂಬಿತವಾಯಿತು. ರಾಜಕೀಯ ಸಂಸ್ಥೆಗಳಲ್ಲಿ ಮಹಿಳಾ ಭಾಗವಹಿಸುವಿಕೆ ಹೆಚ್ಚಿಸುವುದು ಗುರಿಯಾಯಿತು. ಮಹಿಳಾ ಮೀಸಲು ಮಸೂದೆ, ಬೀಜಿಂಗ್‌ನಲ್ಲಿ ಕೈಗೊಂಡ ವಚನದ ಪೂರೈಕೆ ಎಂದೇ ಸರ್ಕಾರವೂ ಪ್ರತಿಪಾದಿಸಿತ್ತು.



ಭಾರತೀಯ ಮಹಿಳೆಯರ ಪ್ರಾತಿನಿಧ್ಯ ಸ್ವಾತಂತ್ರ್ಯದ ಅನಂತರ ಸಾಂಸ್ಥಿಕ ರಾಜಕಾರಣದಲ್ಲಿ ಯಾವಾಗಲೂ ಕಡಿಮೆಯೇ ಇದೆ. ಮಹಿಳಾ ಚಳವಳಿ ಉತ್ತುಂಗದಲ್ಲಿದ್ದಾಗ 1985ರಲ್ಲಿ ಸಂಸತ್‌ನಲ್ಲಿ ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರಿದ್ದರು. ಆಮೇಲೆ ಮಹಿಳಾ ಪ್ರಾತಿನಿಧ್ಯ ಕಡಿಮೆಯಾಯಿತು. ಮಹಿಳಾ ಕ್ಷೇತ್ರ ಒಟ್ಟುಗೂಡಿ ಬಲವಾಗುವ ಬದಲು ಛಿದ್ರವಾಗುತ್ತಿದೆ. ಹೀಗಾಗಿ ರಾಜಕೀಯ ಮಧ್ಯಪ್ರವೇಶದ ತುರ್ತು ಅಗತ್ಯವಿದೆ. ಮಹಿಳಾ ಮೀಸಲು ವಿಚಾರ ಮಹಿಳಾ ನಾಯಕತ್ವಕ್ಕೆ ಅರ್ಥಪೂರ್ಣವಾಗುತ್ತದೆ.



ರಾಜಕೀಯ ನಾಯಕತ್ವ ಅಗತ್ಯ. ಏಕೆಂದರೆ ರಾಜಕೀಯ ವಲಯದಲ್ಲಿ ಸ್ತ್ರೀವಾದಿ ಪ್ರತಿಪಾದನೆ ಎಂದರೆ ಅದು ಬರೀ ಅಧಿಕಾರ ಹಂಚಿಕೆಯಲ್ಲ. ಅಧಿಕಾರದ ಆಡಳಿತ ಸ್ವರೂಪವನ್ನು ಬದಲಿಸುವುದೂ ಆಗಿರುತ್ತದೆ. ಅಧಿಕಾರ ಹಾಗೂ ರಾಜಕಾರಣದ ತತ್ವವನ್ನು ಹೆಚ್ಚು ಮಾಡುವ, ಬದಲಿಸುವ, ವಿಸ್ತರಿಸುವ ಮತ್ತು ಪ್ರಾತಿನಿಧ್ಯದ ಪರಿಕಲ್ಪನೆಗೆ ಪೂರ್ಣ ಅರ್ಥವಂತಿಕೆ ನೀಡುವ ಹಲವು ಹಾದಿಗಳು ಮಹಿಳೆಯರಲ್ಲಿವೆ.

ಅಧಿಕಾರ ಹಾಗೂ ರಾಜಕಾರಣದ ವಿಸ್ತೃತ ಕ್ಷೇತ್ರವನ್ನು ನಿರ್ವಹಿಸುವುದು ಸದ್ಯದ ತುರ್ತು. ಸ್ಥಳೀಯ ಮಟ್ಟಗಳಲ್ಲಿ ಕೆಲಸ ಕಾರ್ಯ, ಕ್ರಿಯೆ ಉಪಯುಕ್ತವಾಗಬಹುದು. ಆದರೆ ಅದು ಅಂಚಿನಲ್ಲೇ ಉಳಿಯುತ್ತದೆ. ಮತ್ತು ಸೀಮಿತ ಪರಿವರ್ತನಾ ಸಾಮರ್ಥ್ಯ ಹೊಂದಿರುತ್ತದೆ. ಬಲವಾದ ರಾಜಕೀಯ ಪರಿಕಲ್ಪನೆ ಮತ್ತು ವಿಚಾರಗಳು ಮಾತ್ರ ಸಬಲೀಕರಣವನ್ನು ವಾಸ್ತವವಾಗಿಸಬಹುದು.

ಮೀಸಲು ವಿಚಾರ ಮಹಿಳಾಚಳವಳಿಯಿಂದ ನೇರ ಉದ್ಭವ ವಾದುದಲ್ಲ. ಅಥವಾ ಈ ಚರ್ಚೆ ಚಳವಳಿಗೂ ಸೀಮಿತವಾಗಿಲ್ಲ. ಮಹಿಳೆಯರಿಂದ ಇಷ್ಟು ದೊಡ್ಡ ಪ್ರತಿಪಾದನೆಯ ಸಾಧ್ಯತೆ ಸ್ಥಾಪಿತ ಹಿತಾಸಕ್ತಿಗಳಿಗೆ ಮುಖ್ಯವಾದುದು. ಸಂಸತ್ ಹಾಗೂ ಹೊರಗೆ ಬಹಳಷ್ಟು ದೊಡ್ಡ ದನಿಯ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ.

ಹಲವು ಸ್ತ್ರೀವಾದಿಗಳು ಮಸೂದೆಯನ್ನು ಸ್ವಾಗತಿಸಿದ್ದಾರೆ. ಮಸೂದೆಗೆ ವಿರೋಧವಾಗಿರುವ ಸಂಸತ್ತಿನ ಪುರುಷ ಸದಸ್ಯರು ಸದನದಲ್ಲೇ ಆಕ್ರಮಣಶೀಲ ವರ್ತನೆಗಳನ್ನು ಪ್ರದರ್ಶಿಸಿದ್ದಾರೆ. ಮಸೂದೆ ತಡೆಯಲು ಪುರುಷರ ಒಟ್ಟು ಸಂಚು ಎದ್ದು ಕಾಣುವಂತೆಯೂ ಇದೆ. 'ಪುರುಷ ಸಂಚು' ಮಹಿಳೆಯರಿಗೆ ವಾಸ್ತವವಾಗಿ ಒಳ್ಳೆಯದೇ ಮಾಡಿದೆ. ಹಿಂದೆಂದೂ ಇಲ್ಲದಷ್ಟು ಎಲ್ಲಾ ಪಕ್ಷಗಳ ಮಹಿಳಾ ಸಂಸದೀಯರನ್ನು ಇದು ಒಂದು ಮಾಡಿದೆ ಎನ್ನುತ್ತಾರೆ ದೇವಕಿ ಜೈನ್. .

ಆದರೆ ಈ ವಿಚಾರದಲ್ಲಿ ಮಹಿಳಾ ಚಳವಳಿ ವಿಭಜಿತವಾಗಿದೆ. ಎಡಪಂಥೀಯ ಮಹಿಳಾ ಸದಸ್ಯರನ್ನೊಳಗೊಂಡ ಒಂದುವರ್ಗ ಮಸೂದೆಯ ಪರವಾಗಿ ಪ್ರಚಾರ ಮಾಡಿದೆ. ಅಷ್ಟೇ ಸಂಖ್ಯೆಯ ಕಾರ್ಯಕರ್ತರು ಹಿಂಜರಿಕೆಯನ್ನೂ ಹೊಂದಿದ್ದಾರೆ. ಅನುಮಾನ, ನಿರ್ಲಕ್ಷ್ಯ ಹಾಗೂ ವಿರೋಧಿ ಭಾವನೆ ಹೊಂದಿದವರೂ ಇದ್ದಾರೆ.

ಮಹಿಳಾಚಳವಳಿ ಎಂದೂ ಮೀಸಲು ಪರ ನಿಲುವಿನತ್ತ ವಾಲಿರಲಿಲ್ಲ, ಪ್ರಮುಖ ನಾಯಕರು 'ಸಮಾನತೆ ಎಂದರೆ ಅದರ ನಿಜಾರ್ಥದಲ್ಲೇ ತೆಗೆದುಕೊಂಡಿದ್ದರು. ಯಾವುದೇ ಬಗೆಯ ಸಕಾರಾತ್ಮಕ ತಾರತಮ್ಯ ತಮ್ಮ ಸಾಧನೆಗಳ ಪೂರ್ಣ ಗುರುತಿಸುವಿಕೆಗೆ ಬೆದರಿಕೆಯಾಗುತ್ತದೆ' ಎಂದೇ ಭಾವಿಸಿದ್ದರು.

ಸಂವಿಧಾನ ರಚನಾ ಸಭೆಯಲ್ಲೂ (ಕಾನ್‌ಸ್ಟಿಟುಯೆಂಟ್ ಅಸೆಂಬ್ಲಿ) ಮಹಿಳಾ ಸದಸ್ಯರು ಸಮಾನತೆ ಹಾಗೂ ಸಾರ್ವತ್ರಿಕ ಮತದಾನದ ಹಕ್ಕು ಸಾಕೆಂದು ವಾದಿಸಿ ಮೀಸಲು ಪ್ರಸ್ತಾವ ತಿರಸ್ಕರಿಸಿದ್ದರು. ಆದರೆ ಈ ಅಸೆಂಬ್ಲಿಯಲ್ಲಿ ಇದ್ದದ್ದು 150 ಪುರುಷ ಸದಸ್ಯರು, 16 ಮಹಿಳೆಯರು! ಸ್ವತಂತ್ರ ಭಾರತದಲ್ಲಿ ಮಹಿಳೆಯರ ರಾಜಕೀಯ ಕಡೆಗಣಿಸುವಿಕೆಗೆ ಮುನ್ಸೂಚನೆ ಯಾಗಿತ್ತು ಇದು.

ರಾಜಕೀಯ ಸಂಸ್ಥೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಸಾಕಷ್ಟಿಲ್ಲದ್ದನ್ನು ಕುರಿತು ಮತ್ತೆ ಮಹಿಳಾ ಸ್ಥಾನಮಾನ ಕುರಿತ ಸಮಿತಿಯ (ಕಮಿಟಿ ಆನ್ ದಿ ಸ್ಟೇಟಸ್ ಆಫ್ ವಿಮೆನ್) ಕಲಾಪದ ಸಂದರ್ಭದಲ್ಲಿ ಗಮನಿಸಲಾಗಿತ್ತು. 1974ರಲ್ಲಿ ಅದು ನೀಡಿದ ವರದಿಯಲ್ಲಿ ಮುನಿಸಿಪಾಲಿಟಿ ಗಳಲ್ಲಿ ಮಹಿಳೆಯರಿಗೆ ಸ್ಥಾನಗಳನ್ನು ಮೀಸಲಿಡಬೇಕು ಎಂದು ಶಿಫಾರಸು ಮಾಡಿತು. ಜೊತೆಗೆ ಸಮಿತಿಗಳು, ಆಯೋಗಗಳು ಹಾಗೂ ಪಂಚಾಯಿತಿ (ಗ್ರಾಮೀಣ ಸ್ಥಳೀಯ ಸರ್ಕಾರಿ ಘಟಕಗಳು) ಗಳಲ್ಲಿ ಮಹಿಳೆಯರನ್ನು ಒಳಗೊಳ್ಳುವಂತಹ ಕ್ರಮಗಳಿಗೆ ಶಿಫಾರಸು ಮಾಡಿತು. ಅಲ್ಲದೆ ಅಸೆಂಬ್ಲಿ, ಪಾರ್ಲಿಮೆಂಟ್‌ಗಳಿಗೆ ಕನಿಷ್ಠ ಪ್ರಮಾಣದ ಮಹಿಳಾ ಅಭ್ಯರ್ಥಿಗಳು ಹಾಗೂ ಸರ್ವ ಮಹಿಳಾ ಪಂಚಾಯಿತಿಗಳ ರಚನೆಗೂ ಶಿಫಾರಸು ಮಾಡಿತು.

ಈ ಕ್ರಮಗಳಿಗೆ ಆಕ್ಷೇಪ ತೋರಿದ ಕೆಲವು ಸದಸ್ಯರು ಸಭೆಯ ನಡಾವಳಿಯಲ್ಲಿ ತಮ್ಮ ವಿರೋಧ ದಾಖಲಿಸಿದ್ದಾರೆ. ಕಟ್ಟಾ ಚಳವಳಿಗಾರ್ತಿ ಫುಲ್‌ರೇಣು ಗುಹಾ ಹೀಗೆ ವಾದಿಸಿದ್ದಾರೆ :

> 'ಮಹಿಳೆಯರು ಸಮಾಜದ ಅಂಗವಾಗಿದ್ದಾರೆ. ಮೀಸಲು ಅವಕಾಶ - ಸಮಾಜದೊಳಗೆ ಮಿಳಿತವಾದ ಅವರ ಪ್ರಾತಿನಿಧ್ಯವನ್ನು ಉತ್ತೇಜಿಸುವ ಬದಲಿಗೆ ಅವರ ಪ್ರತ್ಯೇಕ ಅಸ್ತಿತ್ವವನ್ನೇ ಪೋಷಿಸುತ್ತದೆ'.

ಟ್ರೇಡ್ ಯೂನಿಯನಿಸ್ಟ್, ತೀವ್ರ ಸಮಾಜವಾದಿ ಹಾಗೂ ಮಾನವತಾವಾದಿ ಮಣಿಬೆನ್ ಕಾರಾ, ಅವರೂ ಫುಲ್‌ರೇಣು ಗುಹಾ ಅವರನ್ನು ಸಮರ್ಥಿಸಿದ್ದಾರೆ:

> **'ಶಾಸನಸಭೆ ಮತ್ತಿತರ ಚುನಾಯಿತ ಸಂಸ್ಥೆ ಗಳಿಗೆ ಮೀಸಲು ವ್ಯವಸ್ಥೆಯನ್ನು ನಾನು ವಿರೋಧಿಸುತ್ತೇನೆ. ಮಹಿಳೆಯರ ಹೆಚ್ಚಿನ ಪ್ರಾತಿನಿಧ್ಯ ಅವರದೇ ಹಿತಾಸಕ್ತಿ ಹಾಗೂ ಸಮಾಜದ ಹಿತಾಸಕ್ತಿಗಾಗಿ ಅಗತ್ಯ. ಆದರೆ ತಮ್ಮ ಹಕ್ಕುಗಳು ಹಾಗೂ ಹೊಣೆಗಾರಿಕೆಗಳಿಗಾಗಿ ಮಹಿಳೆಯರಲ್ಲಿ ಜಾಗೃತಿ ಮೂಡಿಸಿ ಅದರ ಪರವಾಗಿ ಸಾರ್ವಜನಿಕ ಅಭಿಪ್ರಾಯ ಸೃಷ್ಟಿಸಿ ಅವರೇ ಅದನ್ನು ಪಡೆದು ಕೊಳ್ಳುವಂತಾಗಬೇಕು'.**

ಇವೇ ಅನೇಕ ವಾದವಿವಾದಗಳು ಸಮಕಾಲೀನ ಚರ್ಚೆಗಳ ವೇಳೆಯಲ್ಲೂ ಮತ್ತೆ ಅನುರಣಿಸಿವೆ. ವಿಸ್ತೃತ ಮೀಸಲು ಪರವಾಗಿ ಲೋತಿಕಾ ಸರ್ಕಾರ್ ಹಾಗೂ ವೀಣಾ ಮಜುಂದಾರ್ ಅವರು ಮಂಡಿಸಿದ್ದ ವಾದ ಹೀಗಿದೆ:

> **'ಅಪಾರ ಅಸಮಾನತೆಗಳಿರುವ ಸಮಾಜದಲ್ಲಿ ಪ್ರಜಾ ತಂತ್ರದ ತತ್ವ ಅನ್ವಯಿಸುವಾಗ, ಅಂತಹ ವಿಶೇಷ ರಕ್ಷಣಾಕ್ರಮಗಳು ಅಸಮಾನತೆಯ ತಡೆಗಳನ್ನು ಭೇದಿಸಿ ಹೋಗುವ ವಾಹಕಗಳಾಗುತ್ತವೆ ಅಷ್ಟೆ. ಚಲಾಯಿಸಲಾಗದ ಹಕ್ಕಿನಂತೆ ಸಾಧಿಸಲಾಗದ ಗುರಿಯೂ ಅರ್ಥ ಹೀನ. ಸಂಪ್ರದಾಯಶೀಲ ಭಾರತದಲ್ಲಿ ಎರಡನೇ ದರ್ಜೆ ನಾಗರಿಕರಂತೆ ಬದುಕಿದ ವರ್ಗಗಳ ಮೇಲೆ ಸಮಾಜ ವ್ಯವಸ್ಥೆ ಹೇರುವ ಅಪಾರ ಅಡೆ ತಡೆಗಳ ಮಧ್ಯೆ ಸಮಾನ ಅವಕಾಶಗಳನ್ನು ಸಾಧಿಸುವುದು ಕಷ್ಟ. ಅಸಮಾನ ಪರಿ ಸ್ಥಿತಿಗಳ ಸಂದರ್ಭದಲ್ಲಿ ಸಮಾನತೆಯ ಸೈದ್ಧಾಂತಿಕ ತತ್ವದ ಅಳವಡಿಕೆ ಅಸಮಾನತೆಗಳನ್ನು ಮತ್ತಷ್ಟು ತೀವ್ರಗೊಳಿಸುತ್ತದೆ. ಏಕೆಂದರೆ ಅಂತಹ ಸನ್ನಿವೇಶಗಳಲ್ಲಿ ಸಮಾನತೆ ಎಂಬುದು ಅದರ ಅಗತ್ಯ ಇರುವವರಿಗಿಂತ ಹೆಚ್ಚಾಗಿ ಈಗಾಗಲೇ ಅದನ್ನು ಹೊಂದಿದವರ ಪ್ರತಿಷ್ಠೆಯಾಗುತ್ತದೆ.'**

ಒಟ್ಟಾರೆ ಸ್ಥಳೀಯ ಸರ್ಕಾರದಲ್ಲಿ ಮಹಿಳೆಯರಿಗೆ ಸ್ಥಾನ ಮೀಸಲಿಡಬೇಕೆಂದು ಸಮಿತಿ ಶಿಫಾರಸು ಮಾಡಿತು.

1957ರಲ್ಲಿ ಪಂಚಾಯತ್ ರಾಜ್ ಕಾಯಿದೆಗೆ ಅನುಗುಣವಾಗಿ ಮಹಿಳೆ ಮತ್ತು ಮಕ್ಕಳ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಲು ಇಷ್ಟ ಪಡುವ ಇಬ್ಬರು ಮಹಿಳೆಯರನ್ನು ಸಹ ಸದಸ್ಯರಾಗಿ ಸೇರಿಸಿಕೊಳ್ಳಲು ಅವಕಾಶ ನೀಡಲಾಗಿತ್ತು. (ಬಲವಂತ್‌ರಾಯ್ ಮೆಹ್ತಾ ಸಮಿತಿ ವರದಿ).

1961ರ ಮಹಾರಾಷ್ಟ್ರ ಜಿಲ್ಲಾ ಪರಿಷತ್ ಹಾಗೂ ಪಂಚಾಯತ್ ಸಮಿತಿ ಕಾಯಿದೆ ಮಹಿಳೆಯರು ಚುನಾಯಿತರಾಗದಿದ್ದಲ್ಲಿ ಒಬ್ಬರು ಅಥವಾ ಇಬ್ಬರು ಮಹಿಳೆಯರ ನಾಮಕರಣಕ್ಕೆ ಅವಕಾಶ ನೀಡಿತು. 1973ರ ಪಶ್ಚಿಮ ಬಂಗಾಳ ಪಂಚಾಯಿತಿ ಕಾಯಿದೆ ಇಬ್ಬರು ಮಹಿಳೆಯರನ್ನು ಸಹ ಸದಸ್ಯರನ್ನಾಗಿಸಿಕೊಳ್ಳಲು ಅವಕಾಶ ನೀಡಿತು.

1983ರಲ್ಲಿ ಕರ್ನಾಟದಲ್ಲಿ ಈ ಬಗ್ಗೆ ಕಾನೂನು ಜಾರಿಯಾದಾಗ ಅದು ಹೊಸದೊಂದು ಅಧ್ಯಾಯಕ್ಕೆ ಮುನ್ನುಡಿ ಬರೆಯಿತು. ಸ್ಥಳೀಯ ಸಂಸ್ಥೆಗಳಲ್ಲಿ ಶೇ. 25 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡುವ ನಿರ್ಧಾರ ಅದು. 1987ರಲ್ಲಿ ಈ ಸಂಬಂಧ ನಡೆದ ಮೊದಲ ಚುನಾವಣೆಗಳಲ್ಲಿ ಈ ವಿಚಾರದಲ್ಲಿ ಚೈತನ್ಯ ತುಂಬಿದ್ದು ಮಹಿಳಾ ಚಳವಳಿಯಲ್ಲ, ಆದರೆ ಜನಪರ ಕಾರ್ಯಸೂಚಿಯಾಗಿ ಪ್ರಜಾ ಸತ್ತಾತ್ಮಕ ಸಮಾಜವಾದ ಹಾಗೂ ಗಾಂಧಿವಾದದ ರಾಜಕಾರಣ ಮಿಶ್ರಣವನ್ನು ಸಿದ್ಧಾಂತವಾಗಿ ಹೊಂದಿದ್ದ ಜನತಾ ದಳದಿಂದ ಆಯಿತು.

10 ವರ್ಷಗಳ ಅನಂತರ ಇದೇ ವಿಚಾರವನ್ನು ರಾಷ್ಟ್ರ ವ್ಯಾಪಿಯಾಗಿ ಅಳವಡಿಸಿಕೊಳ್ಳಲಾಯಿತು. 1992ರ ಸಂವಿಧಾನದ 73ನೇ ತಿದ್ದುಪಡಿ ಹಾಗೂ 1992ರ ಸಂವಿಧಾನದ 74ನೇ ತಿದ್ದುಪಡಿ ಅಂಗೀಕರಿಸಲಾಯಿತು. ಮೊದಲನೆಯ ತಿದ್ದುಪಡಿ ಪಂಚಾಯಿತಿ ಹಾಗೂ ಎರಡನೇ ತಿದ್ದುಪಡಿ ಮುನಿಸಿಪಾಲಿಟಿಗಳಿಗೆ ಸಂಬಂಧಿಸಿತ್ತು. ಒಟ್ಟಾರೆ ಎಲ್ಲಾ ಪಂಚಾಯಿತಿ ಹಾಗೂ ಮುನಿಸಿಪಾಲಿಟಿಗಳಲ್ಲಿ ಮೂರನೇ ಒಂದರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿತ್ತು. ಈ ಕ್ರಾಂತಿಕಾರಕ ಹೆಜ್ಜೆಯ ಪೂರ್ಣಫಲ ಇನ್ನೂ ಸಿಗಬೇಕಿದೆ.

ಪಂಚಾಯಿತಿ ಮೀಸಲನ್ನು ದಿಢೀರ್ ಕ್ರಮದಲ್ಲಿ ಜಾರಿಗೊಳಿಸ ಲಾಯಿತು. ಇದು ಹೆಚ್ಚು ಚರ್ಚೆಯನ್ನೂ ಹುಟ್ಟು ಹಾಕಲಿಲ್ಲ ಅಥವಾ ವಿರೋಧವೂ ಬರಲಿಲ್ಲ.

ಹಲವೆಡೆ ಮಹಿಳೆಯರು ಅಧಿಕಾರ ವಹಿಸಿಕೊಂಡಿದ್ದರಿಂದ ಹೆಚ್ಚಿನ ಅನುಕೂಲಗಳೂ ಒದಗಿ ಬಂದಿವೆ. ರಾಜಕೀಯ ಅನುಭವದ ಕೊರತೆ ಇದ್ದರೂ ಆತ್ಮವಿಶ್ವಾಸವನ್ನು ಗಳಿಸಿಕೊಂಡಿದ್ದಾರೆ ಪಂಚಾಯಿತಿ ಕಾರ್ಯಕ್ರಮಗಳಲ್ಲಿ ಆದ್ಯತೆಗಳನ್ನು ಪ್ರಶ್ನಿಸಿ ಇಂಧನ, ನೀರು, ಶಾಲೆ ಇತ್ಯಾದಿ ವಿಚಾರಗಳಿಗೆ ಪ್ರಾಮುಖ್ಯ ನೀಡಿದ್ದಾರೆ. ಪಕ್ಷದಹಿತಕ್ಕಿಂತ ವಿಸ್ತೃತ ಮೈತ್ರಿ ಸಾಧಿಸಲು ಸಫಲರಾಗಿದ್ದಾರೆ.

81 ನೇ ತಿದ್ದುಪಡಿ ಮಂಡಿಸಿದಾಗ ಇದರ ಆಶಯಗಳು 73 ಹಾಗೂ 74ನೇ ತಿದ್ದುಪಡಿಯಂತೇ ಇದ್ದವು. ಲೋಕಸಭೆ ಹಾಗೂ ರಾಜ್ಯ ಶಾಸನಸಭೆಗಳಲ್ಲಿ ಪರಿಶಿಷ್ಟ ಜಾತಿ, ವರ್ಗಗಳ ಮೀಸಲಿನ ಜತೆಗೇ ಮೂರನೇಒಂದು ಭಾಗದಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡು ವುದು. ಸ್ವಾತಂತ್ರ್ಯ ಬಂದಾಗಿನಿಂದಲೂ ಸಂಸತ್ತಿನಲ್ಲಿ ಮಹಿಳೆಯರ ಭಾಗವಹಿಸುವಿಕೆ ಅತ್ಯಂತ ಕಡಿಮೆ ಇದೆ ಎಂಬ ಕಾರಣವನ್ನು ಇದಕ್ಕೆ ನೀಡಲಾಗಿತ್ತು. 1995ರಲ್ಲಂತೂ ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆ ಯರ ಪ್ರಾತಿನಿಧ್ಯ ಕೇವಲ ಶೇ. 3.9ರಷ್ಟಿತ್ತು.


ಈಗ ಈ ವಿಚಾರ ಕಟುವಾದ ವಿವಾದಗಳಿಗೆ ಕಾರಣವಾಗಿದೆ. ರಾಜಕೀಯ ಹಾಗೂ ಸಾರ್ವಜನಿಕ ಬದುಕಿನಲ್ಲಿ ಮಹಿಳೆಯರ ಕೊರತೆ ಈಗಾಗಲೇ ಈ ಪ್ರಜಾಸತ್ತಾತ್ಮಕ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರ ಹೆಂಡತಿಯರು ಹಾಗೂ ಹೆಣ್ಣುಮಕ್ಕಳನ್ನು ಕರೆತರುತ್ತದೆ. ಇಂತಹ ಮಹಿಳೆಯರು ಪುರುಷ ಸಂಬಂಧಿಗಳ ಧ್ವನಿಯಾಗುತ್ತಾರಷ್ಟೇ. 'ಬೀವಿ ಬ್ರಿಗೇಡ್' ಅಸ್ತಿತ್ವಕ್ಕೆ ಬರುತ್ತದೆ ಎಂಬಂತಹ ಕಟು ಟೀಕೆಗಳನ್ನೆಲ್ಲಾ ಮಾಡಲಾಗಿದೆ.

ಆದರೆ ಕುಟುಂಬವನ್ನು ಬಳಸಿಕೊಂಡು ರಾಜಕೀಯ ಅಧಿಕಾರ ಪಡೆಯುವ ಮಹಿಳೆ ಆ ಅಧಿಕಾರ ಬಲದಿಂದ ಕುಟುಂಬ ವ್ಯವಸ್ಥೆಯಲ್ಲಿ ಪರಿವರ್ತನೆ ತರಬಹುದು ಎಂಬಂತಹ ಆಶಯಗಳೂ ವ್ಯಕ್ತವಾಗಿವೆ.

ಮೀಸಲು ಮಸೂದೆ ರಾಜಕೀಯ ವ್ಯವಸ್ಥೆಯಲ್ಲಿರುವ ಎಲ್ಲಾ ಅಸಮಾನತೆಗಳನ್ನೂ ಬದಲಾಯಿಸಿಬಿಡಬಹುದಾದ ಮಂತ್ರದಂಡವೇನೂ ಅಲ್ಲ. ಆದರೆ ರಾಜಕೀಯ ನಿರ್ಧಾರ ಕೈಗೊಳ್ಳುವ ಕ್ಷೇತ್ರಕ್ಕೆ ಗಣನೀಯ ಸಂಖ್ಯೆಯ ಮಹಿಳೆಯರ ಪ್ರವೇಶವನ್ನು ಖಚಿತಗೊಳಿಸುತ್ತದೆ.

(ಆಕರ : ಟುವರ್ಡ್ಸ್ ಅ ಫೆಮಿನಿಸ್ಟ್ ಪಾಲಿಟಿಕ್ಸ್ ? ದಿ ಇಂಡಿಯನ್ ವಿಮೆನ್ಸ್ ಮೂವ್‌ಮೆಂಟ್ ಇನ್ ಹಿಸ್ಟಾರಿಕಲ್ ಪರ್ಸ್‌ಪೆಕ್ಟಿವ್ – ಸಮಿತಾ ಸೇನ್; ಪಾಲಿಸಿ ರಿಸರ್ಚ್ ರಿಪೋರ್ಟ್, ಜೆಂಡರ್ ಅಂಡ್ ಡೆವೆಲಪ್‌ಮೆಂಟ್, ದಿ ವರ್ಲ್ಡ್ ಬ್ಯಾಂಕ್)

❑



ಸ್ವಾತಂತ್ರ್ಯದ ಅರ್ಥ

• **ಬಿ.ಎಸ್. ಪೂರ್ಣಿಮಾ,** (ವಿದ್ಯಾರ್ಥಿನಿ) ಮೈಸೂರು

ಹುಟ್ಟುವುದಕ್ಕೂ ಈ ಭೂಮಿಯ ಮೇಲೆ ಸ್ವತಂತ್ರ್ಯವಿಲ್ಲದ ಜೀವ ಹೆಣ್ಣು ಮಾನವ. ಹೆಣ್ಣನ್ನು ಕರುಣಾಮಯಿ, ಸಹನಾಮಯಿ, ಭೂಮಿ ತಾಯಿ ಇನ್ನಿತರ ಹೆಸರುಗಳಿಂದ ವೈಭವೀಕರಿಸಿ, ಇವೇ ಗುಣಗಳನ್ನು ಅವಳು ಹೊಂದಿರಬೇಕೆಂದು ಹೇಳಿ ಗಂಡಸರು ಯಾವ ಶೋಷಣೆ ಮಾಡಿದರೂ ಹೆಂಗಸರು ಸಹಿಸಿಕೊಳ್ಳುವಂತೆಯೂ ಸೋಲುವಂತೆಯೂ ಹಾಗೂ ಸ್ವತಂತ್ರವಾಗಿ ಯೋಚಿಸದಂತೆಯೂ ಮಾನಸಿಕ ಹೊರೆಯನ್ನು ಹಿಂದಿನಿಂದಲೂ ಹೊರಿಸುತ್ತಾ ಬಂದಿದ್ದಾರೆ.

ಪ್ರಾಚೀನ ಕಾಲದಿಂದಲೂ ನಾಲ್ಕು ಗೋಡೆಗಳ ಮಧ್ಯೆ ಜೀವಿಸುತ್ತಿದ್ದ ಹೆಣ್ಣು ಇತ್ತೀಚೆಗಷ್ಟೇ ಹೊರಪ್ರಪಂಚಕ್ಕೆ ಕಾಲಿಡುತ್ತಿದ್ದಾಳೆ. ಕಾರಣ ಶಿಕ್ಷಣ. ಕೇವಲ ಗಂಡುಮಕ್ಕಳಿಗಷ್ಟೇ ಸೀಮಿತವಾಗಿದ್ದ ಶಿಕ್ಷಣ ಇಂದು ಹೆಣ್ಣುಮಕ್ಕಳಿಗೂ ಲಭ್ಯವಿರುವುದು ಸಾಮಾಜಿಕ ಕ್ರಾಂತಿಯನ್ನುಂಟು ಮಾಡಿದೆ. ಅದರಲ್ಲೂ ಸರ್ಕಾರ ಜಾರಿಗೆ ತಂದಿರುವ ಕಡ್ಡಾಯ ಶಿಕ್ಷಣದ ಫಲವಾಗಿ ಮಹಿಳೆಯರ ಶಿಕ್ಷಣದಲ್ಲಿ ಗಣನೀಯ ಪ್ರಗತಿ ಕಂಡುಬಂದಿದೆ. ಗಂಡಿನ ಆಶ್ರಯವಿಲ್ಲದೆ ಬದುಕಲು ಸಾಧ್ಯವೇ ಇಲ್ಲ ಎಂಬುದೊಂದು ಕಾಲವಿತ್ತು. ಸ್ತ್ರೀ ಸಮಾಜ ಇಂದು ಬದಲಾಗಿದೆ. ಒಬ್ಬ ಸುಶಿಕ್ಷಿತ ಸ್ತ್ರೀ ಸ್ವತಂತ್ರವಾಗಿ ಆಲೋಚಿಸಬಲ್ಲಳು, ದುಡಿಯಬಲ್ಲಳು ಹಾಗೂ ಸಂಸಾರ ನಿರ್ವಹಿಸಬಲ್ಲಳು. ಗಂಡಸಿನಷ್ಟೇ ಎಲ್ಲಾ ಕ್ಷೇತ್ರಗಳಲ್ಲಿಯೂ ಸರಿಸಮಾನಳು ಎಂಬುದಕ್ಕೆ ಹಲವಾರು ಸ್ತ್ರೀಯರು ಸಾಧನೆ ಮಾಡಿ ತೋರಿಸಿದ್ದಾರೆ. ಉದಾಹರಣೆಗೆ ಕಲ್ಪನಾ ಚಾವ್ಲ ಹಾಗೂ ಇತ್ತೀಚೆಗಷ್ಟೇ ಬಾಹ್ಯಾಕಾಶದಿಂದ ವಾಪಸ್ಸು ಬಂದ ಸುನಿತಾ ವಿಲಿಯಮ್ಸ್. ಹೀಗೆ ಹೇಳುತ್ತಾ ಹೋದರೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇದರಿಂದಲೇ ಗೊತ್ತಾಗುತ್ತದೆ ಸ್ತ್ರೀಗೆ ಸ್ವಾತಂತ್ರ್ಯ-ಶಿಕ್ಷಣ ದೊರೆತರೆ ಏನನ್ನು ಬೇಕಾದರೂ ಸಾಧಿಸಬಲ್ಲಳೆಂದು.

ಮಹಿಳೆಯರು ವಿದ್ಯಾವಂತರಾಗಿ ಸುಶಿಕ್ಷಿತರಾಗದೇ ಹೋದರೆ ಸುಬಲೀಕರಣ ಆಗುವುದು ಸಾಧ್ಯವಿಲ್ಲ. ಅಲ್ಲದೇ ಸ್ವತಃ ತಾವೇ ಶೋಷಣೆಗೆ ಒಳಗಾಗುವುದಲ್ಲದೆ ಶೋಷಕರೂ ಕೂಡ ಆಗುತ್ತಾರೆ ಎಂಬುದನ್ನು ಅವರು ನಂಬಿದ್ದರು.

ಸ್ವಾತಂತ್ರ್ಯಾನಂತರ ಮಹಿಳೆಯರ ಉನ್ನತ ಶಿಕ್ಷಣ ಏಕಪ್ರಕಾರವಾಗಿ ಹೆಚ್ಚುತ್ತಾ ಬರುತ್ತಿದೆ. ಹಾಗೂ ಅವರು ಕಲಾಶಾಸ್ತ್ರಗಳಂತೆ ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲೂ ಶಿಕ್ಷಣ ಪಡೆಯುತ್ತಿರುವುದು ಹೆಚ್ಚುತ್ತಿದೆ. ಶಿಕ್ಷಣ, ವೈದ್ಯ ಕಾರ್ಯಾಲಯದ ವಿದ್ಯೆ, ಉಪಚಾರಿಕೆ, ಅಧ್ಯಾಪನ, ಕುಶಲತೆ, ಲಲಿತಕಲೆ, ವಾಣಿಜ್ಯ, ಎಂಜಿನಿಯರಿಂಗ್, ಟೆಲಿಫೋನ್, ಎಲೆಕ್ಟ್ರಾನಿಕ್ಸ್ ಮುಂತಾದ ತಾಂತ್ರಿಕ ವಿಷಯಗಳಲ್ಲೂ ಅವರ ಸಂಖ್ಯೆ ಹೆಚ್ಚುತ್ತಿದೆ.

ಭಾರತ ಸರ್ಕಾರ, ರಾಜ್ಯ ಸರ್ಕಾರ ಮತ್ತು ಬ್ಯಾಂಕುಗಳು ನಡೆಸುವ ಸ್ಪರ್ಧಾ ಪರೀಕ್ಷೆಗಳಲ್ಲೂ ಅವರು ಗಣನೀಯ ಸಂಖ್ಯೆಯಲ್ಲಿ ತೇರ್ಗಡೆಯಾಗಿ ಸಾರ್ವಜನಿಕ ಸ್ಥಾನಗಳಿಗೆ ಹೆಚ್ಚುಹೆಚ್ಚಾಗಿ ನೇಮಕವಾಗುತ್ತಿರುವರು.

ವಿಪರ್ಯಾಸವೆಂದರೆ ಹೆಣ್ಣು ಎಷ್ಟೇ ಮುಂದುವರೆದರೂ ಶೋಷಣೆಗೆ ಒಳಗಾಗುತ್ತಿರುವುದು. ಭ್ರೂಣಹತ್ಯೆ, ಲೈಂಗಿಕ ಕಿರುಕುಳ ಇಂತಹ ಅನಿಷ್ಟಗಳು ತೊಲಗಿದಾಗ ಮಾತ್ರ ಸ್ತ್ರೀ ಸ್ವತಂತ್ರಳು ಎನ್ನಬಹುದು.

ರಾಮಮನೋಹರ ಲೋಹಿಯಾರವರು ಹೇಳುವ ಹಾಗೆ ಗಂಡು ಸೂಳೆಯರನ್ನು ಭಾರತದಲ್ಲಿ ನಿಂದಿಸುವುದಿಲ್ಲ. ಆದರೆ ಅನಿವಾರ್ಯವಾಗಿ ವೇಶ್ಯಾವಾಟಿಕೆಯಲ್ಲಿ ತೊಡಗಿದ ಹೆಣ್ಣುಗಳನ್ನು ಮಾತ್ರ ಇಲ್ಲಿ ಒಂದೇ ಸಮನೆ ತೆಗಳುತ್ತಾರೆ. ಪ್ರಪಂಚದ ಎಲ್ಲ ಕಡೆಗಳಲ್ಲಿ ಹೆಚ್ಚು ಕಡಿಮೆ ಈ ರೋಗ ಕಾಣಿಸುತ್ತಲೇ ಇದೆ. ಈ ಪ್ರವೃತ್ತಿ ಬೇಗ ತೊಲಗಬೇಕು. ಹೆಣ್ಣು ತುಂಬಿದ ಗೋಣಿಚೀಲವಾಗಬಾರದು; ಸಮಯ ಬಂದರೆ ಸಮಾಜದ ಕಣ್ಣೇ ಆಗಿರುವ ಈಕೆ - ಗಂಡನನ್ನೇ ಗೋಣಿಚೀಲದಂತೆ ತನ್ನ ಹೆಗಲಲ್ಲಿ ಹೊತ್ತು ನಿಶ್ಚಿಂತೆಯಿಂದ ಸಾಗಬಲ್ಲ ಶಕ್ತಿವಂತೆಯಾಗಿರಬೇಕು. ❑

"....ಅರ್ಥಾರ್ಜನೆಗಾಗಿ ನಾವು ಹೊರಬೀಳುತ್ತಿದ್ದೆವು. ಆದರೆ ಮನೆ ಸೇರುವಾಗ ಸ್ತ್ರೀಯತ್ವದ ಕವಚವನ್ನು ಪುನಃ ತೊಟ್ಟು ಒಳಗೆ ಹೋಗುತ್ತಿದ್ದೆವು. ಒಳಗೆ ಸೇರುವಾಗ ನಮ್ಮ ಪುರುಷ ಮುಖವಾಡ ಹೊರಬಾಗಿಲಲ್ಲಿ ತೂಗಿರುತ್ತಿತ್ತು. ಮುಂಜಾನೆಯ ಹಾದಿ ಕಾಯುತ್ತ! ಮನೆಯೊಳಗೆ ಸ್ತ್ರೀಯತ್ವ ಸೆರಗು ಸಿಕ್ಕಿಸಿಕೊಂಡು ಕೆಲಸದ ಅವಸರದಲ್ಲಿ ಓಡಾಡುತ್ತಿತ್ತು... ಇದು ನನ್ನದಲ್ಲ, ಗಳಿಸುವ ಪ್ರತಿಯೊಬ್ಬ ಮಹಿಳೆಯ ದುರಂತವಾಗಿತ್ತು. ಆಕೆ ಶಿಕ್ಷಣ, ಕರ್ತವ್ಯ, ಅವಶ್ಯಕತೆ, ಸುಖದ ಮೋಹಕ್ಕೆ, ಒಳಗಾಗುತ್ತಾಳೆ. ತಾನಾಗಿಯೇ ನೌಕರಿಯ, ಅರ್ಥಾರ್ಜನೆಯ ಸಂಕೋಲೆಯನ್ನು ಧರಿಸುತ್ತಾಳೆ. ಆರಂಭದಲ್ಲಿ ಈ ಬಂಗಾರದ ಸಂಕೋಲೆ ಅಪೂರ್ವವೆನಿಸುತ್ತದೆ. ಆದರೆ ಈ ಮೊದಲಿನ ಮಂಗಳಸೂತ್ರದ ಸಂಕೋಲೆಯ ಜೊತೆಗೆ ಇನ್ನೊಂದು ಸಂಕೋಲೆಯನ್ನು ಧರಿಸಿದ್ದು ಆ ಹುಚ್ಚಿಗೆ ಅರಿವಾಗುವುದೇ ಇಲ್ಲ..."

('ಕುಣಿಯೇ ಘಮಾ', ಲೇ: ಮಾಧವಿದೇಸಾಯಿ, ನವಕರ್ನಾಟಕ ಪ್ರಕಾಶನ - ಬೆಂಗಳೂರು)

ಲಿಂಗತ್ವ (ಜೆಂಡರ್) ಎಂದರೇನು?

ಇಂಗ್ಲಿಷ್ ಮೂಲ :
ಅಂಡರ್‌ಸ್ಟ್ಯಾಂಡಿಂಗ್ ಜೆಂಡರ್

ಲೇಖಕರು : ಕಮಲಾ ಭಾಸಿನ್
ಕನ್ನಡಕ್ಕೆ : ವೆಂ. ವನಜ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಪುಲ್ಲಿಂಗದ ಬಳಕೆಯನ್ನು ಒಂದು ಒಪ್ಪಿತ ಪ್ರಮಾಣ ಮತ್ತೆ ಮಾನದಂಡವೆಂದು ಭಾವಿಸಲಾಗಿದೆ. "ಮನುಷ್ಯ ಜಾತಿ", "ಅವನು" ಮತ್ತು "ಅವನ" ಶಬ್ದಗಳನ್ನು ಮಹಿಳೆಯರಿಗೆ ಸಂಬಂಧಿಸಿದಂತೆಯೂ ಬಳಸಲಾಗುತ್ತದೆ. ಇಂಗ್ಲಿಷಿನಲ್ಲಿ ಚೇರ್‌ಮನ್, ನ್ಯೂಸ್‌ಮನ್, ಸ್ಪೋರ್ಟ್ಸ್‌ಮನ್, ಒನ್‌ಮ್ಯಾನ್ ಷೋ ಮತ್ತಿತರ ನೂರಾರು ಪದಗಳನ್ನು ಈ ಪಾತ್ರಗಳಲ್ಲಿರುವ ನೂರಾರು ಪಾತ್ರಗಳಿಗೆ ಸಾಮಾನ್ಯವಾಗಿ ಬಳಸಲಾಗುತ್ತದೆ. ಈ ರೂಢಿ ಈಗ ಬದಲಾಗುತ್ತಿದೆ.

ಸಾಮಾಜಿಕ ವಿಜ್ಞಾನಗಳು, ತತ್ತ್ವಶಾಸ್ತ್ರ ಮತ್ತಿತರ ಅಧ್ಯಯನ ಶಿಸ್ತುಗಳ ಭಾಷೆ ಪುರುಷ ಪ್ರಧಾನವಾಗಿ ಮುಂದುವರಿಯುತ್ತಾ ಬಂದಿದೆ. ಅಲ್ಲದೆ ಮಹಿಳೆಯರನ್ನು ಕಡೆಗಣಿಸುತ್ತಾ, ಪಕ್ಕಕ್ಕೆ ಸರಿಸುತ್ತದೆ ಅಥವಾ ತಪ್ಪಾಗಿ ಪ್ರತಿನಿಧಿಸುತ್ತದೆ. ಅಮೂರ್ತ ಚಿಂತನೆಯನ್ನು ಮುಂದಿಡುವ ವಿಧಾನ, ಮತ್ತದನ್ನು ವ್ಯಕ್ತಗೊಳಿಸುವ ಭಾಷೆಗಳೆರಡೂ ಮಹಿಳೆಯರನ್ನು ಪಕ್ಕಕ್ಕೆ ತಳ್ಳುವುದನ್ನು ಮುಂದುವರಿಸಲೆಂದೇ ಇದ್ದಂತಿರುತ್ತವೆ. ನಾವು ಬಳಸುತ್ತಾ ಬಂದಿರುವ, ಪುರುಷ ಪ್ರಧಾನ ಚಿಂತನೆ ಪ್ರತಿಫಲಿಸುತ್ತಿರುವ ಭಾಷೆಯ ಮೂಲಕವೇ ನಮ್ಮನ್ನು ನಾವು ಅನಾವರಣಗೊಳಿಸಿಕೊಳ್ಳಬೇಕಾಗಿದೆ. ಗಂಡಿನ ಸರ್ವನಾಮದ ಕಕ್ಷೆಯಲ್ಲಿ ನಾವು ಕಾಣಿಸಿಕೊಳ್ಳುವ ಭಾಷೆ ಇದಾಗಿದೆ. ಇದರಲ್ಲಿ "ಮಾನವೀಯ" ಶಬ್ದಕ್ಕೆ ಮೂಲ ಶಬ್ದ "ಮಾನವ" ಅಂದರೆ ಗಂಡು ಎಂದಾಗುತ್ತದೆ. ಮಹಿಳೆಯರು ತಮ್ಮದೇ ದೇಹದ ಅನುಭವಗಳನ್ನು ವರ್ಣಿಸಲು "ಹೊಲಸು ಪದಗಳು" ಅಥವಾ "ಗುಪ್ತ ಪದಗಳನ್ನು" ಬಳಸಬೇಕಾಗಿ ಬಂದಿದೆ. ಪ್ರತಿಯೊಂದು ಭಾಷೆಯಲ್ಲೂ ಅತ್ಯಂತ ಅಪಮಾನಕರವಾದ (ಶಬ್ದಗಳು)ವು ಹೆಣ್ಣುದೇಹಕ್ಕೆ ಅಥವಾ ಹೆಣ್ಣಿನ ಲೈಂಗಿಕತೆಗೆ ಸಂಬಂಧಿಸಿರುತ್ತವೆ. (ಗರ್ಡಾ ಲರ್ನರ್ : ದಿ ಮೆಜಾರಿಟಿ ಫೈಂಡ್ಸ್ ಇಟ್ಸ್ ಪಾಸ್ಟ್ : ಪ್ಲೇಸಿಂಗ್ ವಿಮೆನ್ ಇನ್ ಹಿಸ್ಟರಿ: ಪು:232)

ಇಲ್ಲಿ ಹೇಳಲು ಯೋಗ್ಯವಾದ ಮತ್ತೊಂದು ಅಂಶವೆಂದರೆ, ನಮ್ಮ ಭಾಷೆಗಳಲ್ಲಿ ಕೆಲವು ಶಬ್ದಗಳು ಮತ್ತು ಪಾತ್ರಗಳು (ಲಿಂಗತ್ವ ಅಂತರ್ಗತವಾಗಿರುವ) ಲಿಂಗತ್ವ ಆರೋಪಣೆ (gender ascriptive)ಗಳಾಗಿವೆ. ಉದಾಹರಣೆಗೆ, ಚಿಕ್ಕಪ್ಪ–ಚಿಕ್ಕಮ್ಮ, ಸೋದರ–ಸೋದರಿ, ತಾಯಿ–ತಂದೆ ಶಬ್ದಗಳು ಆ ವ್ಯಕ್ತಿಗಳ ಲಿಂಗತ್ವ ಅಥವಾ ಲಿಂಗವನ್ನು ಸೂಚಿಸುತ್ತವೆ. ಆದರೆ ಮತ್ತೆ ಕೆಲವು ಶಬ್ದಗಳು ಲಿಂಗತ್ವ ಆರೋಪಣೆಯನ್ನು ಹೊಂದಿಲ್ಲವಾದರೂ ಅವು ಪುರುಷ ಅಥವಾ ಮಹಿಳೆಗೆ ಸಂಬಂಧಿಸಿವೆಯೆಂದು ಗ್ರಹಿಸಲಾಗುತ್ತದೆ. ಉದಾಹರಣೆಗೆ ಕಾರ್ಯದರ್ಶಿ, ದಾದಿ, ಶಿಶುವಿಹಾರದ ಶಿಕ್ಷಕರು ಎಂಬಿವೇ ಶಬ್ದಗಳು ಮಹಿಳೆಯರಿಗೆ ಅನ್ವಯಿಸಿದರೆ, ಅಧಿಕಾರಿ, ಪೈಲಟ್, ಮೇನೇಜರ್, ರಾಜಕಾರಣಿ, ಶಸ್ತ್ರಚಿಕಿತ್ಸಕರು, ಅಥವಾ ರೈತ ಶಬ್ದಗಳು ಪುರುಷರಿಗೆ ಸಂಬಂಧಿಸಿವೆಯೆಂದು ಗ್ರಹಿಸಲಾಗುತ್ತದೆ. ಸಾರ್ವಜನಿಕ ಸ್ಥಳಗಳು ಮತ್ತು ಉದ್ಯೋಗಗಳು ಪುರುಷರ ಸ್ವಾಮ್ಯದಲ್ಲಿ ಮುಂದುವರಿಯುತ್ತಿವೆ ಎನ್ನುವುದನ್ನು ಈ ನಂಬಿಕೆಗಳು ಸಾಬೀತುಗೊಳಿಸುತ್ತವೆ. ವಿಶೇಷವಾಗಿ ನಿರ್ಧಾರ ತೆಗೆದುಕೊಳ್ಳುವ ಮತ್ತು ನಿರ್ವಾಹಕ ಸ್ಥಾನಗಳಲ್ಲಿ ಮಹಿಳೆಯರು ಇಲ್ಲ ಹಾಗೂ ಇವೆರಡರ ನಡುವೆ ದೂರದಲ್ಲಿದ್ದಾರೆ.

ನೀವು ಪದೇ ಪದೇ ಪಿತೃ ಪ್ರಧಾನತೆ ಎಂಬ ಶಬ್ದವನ್ನು ಬಳಸಿದ್ದೀರಿ. ಪಿತೃಪ್ರಧಾನತೆಯು ಲಿಂಗತ್ವದ ಅಸಮಾನತೆ ಮತ್ತು ಮಹಿಳೆಯರ ಅಧೀನತೆಗಳಿಗೆ ಕಾರಣ ಎಂದು ಸೂಚಿಸಿದ್ದೀರಿ. ಈ ಶಬ್ದಕ್ಕೆ ವಿವರಣೆಯನ್ನು ಕೊಡಬಲ್ಲಿರಾ ?

ಮಹಿಳೆಯರು ಮತ್ತು ಪುರುಷರ ನಡುವಿನ ಇಂದಿನ ಸಂಬಂಧಗಳನ್ನು ಅರ್ಥಮಾಡಿಕೊಳ್ಳಲು ಪಿತೃಪ್ರಧಾನತೆಯನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾಗುತ್ತದೆ. ಪಿತೃಪ್ರಧಾನತೆಯ ಕಾರಣದಿಂದಾಗಿಯೇ ಲಿಂಗತ್ವದ ಸಂಬಂಧಗಳು ತಿರುಚಿಕೊಂಡಿವೆ. ಜನಸಾಮಾನ್ಯರ ಮಾತುಕತೆಗಳಲ್ಲಿ ಪಿತೃಪ್ರಧಾನತೆ ಎಂದರೆ ಗಂಡಿನ ಅಧಿಪತ್ಯ ಎಂದಾಗುತ್ತದೆ. 'ಪಿತೃಪ್ರಧಾನತೆ' ಪದದ ಅಕ್ಷರಶಃ ಅರ್ಥ ತಂದೆಯ ಆಳ್ವಿಕೆ ಅಥವಾ 'ಕುಟುಂಬ ಕುಲಪಾಲಕ' ಎಂದು. ಇದನ್ನು ಮೂಲತಃ ಪುರುಷಾಧಿಪತ್ಯವಿರುವ ಕುಟುಂಬದ ಒಂದು ನಿರ್ದಿಷ್ಟ ರೀತಿಯನ್ನು ವರ್ಣಿಸಲು ಬಳಸಲಾಗುತ್ತಿತ್ತು. ಅಂದರೆ ಮಹಿಳೆಯರು, ಯುವಕರು, ಮಕ್ಕಳು, ಗುಲಾಮರು ಮತ್ತು ಮನೆಯ ಸೇವಕರನ್ನೊಳಗೊಂಡ, ಎಲ್ಲರೂ ಅಧಿಕಾರ ಹೊಂದಿರುವ ಗಂಡಿನ ಆಳ್ವಿಕೆಗೊಳಪಟ್ಟಿರುವ, ಕುಲಪಾಲಕನ ದೊಡ್ಡ ಕುಟುಂಬ ಅದಾಗಿರುತ್ತಿತ್ತು. ಇದನ್ನೀಗ ಸಾಮಾನ್ಯವಾಗಿ ಗಂಡಿನ ಅಧಿಪತ್ಯಕ್ಕೆ, ಮಹಿಳೆಯರ ಮೇಲೆ ಆಳ್ವಿಕೆ ನಡೆಸುವ ಅಧಿಕಾರ ಸಂಬಂಧಗಳಿಗೆ ಹಾಗೂ ಮಹಿಳೆಯರನ್ನು ಅನೇಕ ರೀತಿಗಳಲ್ಲಿ ಅಧೀನದಲ್ಲಿಟ್ಟುಕೊಳ್ಳುವ ವ್ಯವಸ್ಥೆಯೊಂದರ ಗುಣಲಕ್ಷಣಗಳನ್ನು ಹೇಳಲು ಬಳಸಲಾಗುತ್ತದೆ. ಉದಾಹರಣೆಗೆ, ಇದನ್ನು ದಕ್ಷಿಣ ಏಷ್ಯಾದಲ್ಲಿ ಹಿಂದಿ ಭಾಷೆಯಲ್ಲಿ 'ಪಿತೃಸತ್ತಾ', ಉರ್ದುವಿನಲ್ಲಿ 'ಪಿದರ್‌ಶಾಹಿ' ಮತ್ತು ಬಾಂಗ್ಲಾದಲ್ಲಿ 'ಪಿತೃತೊಂತ್ರೊ' ಎಂದು ಕರೆಯುತ್ತಾರೆ.

ನಾವು ಯಾವುದೇ ವರ್ಗಕ್ಕೆ ಸೇರಿದವರಾಗಿದ್ದರೂ, ಮಹಿಳೆಯರಾಗಿ ದಿನನಿತ್ಯ ಅನುಭವಿಸುವ ಅಧೀನತೆಯು ಕುಟುಂಬ, ದುಡಿಮೆಯ ಸ್ಥಳ ಮತ್ತು ಸಮಾಜಗಳಲ್ಲಿ ಹಲವು ರೂಪಗಳನ್ನು, ತಾರತಮ್ಯ, ಕಡೆಗಣಿಸುವಿಕೆ, ಅಪಮಾನ, ನಿಯಂತ್ರಣ, ಶೋಷಣೆ, ದಮನ, ಹಿಂಸೆ–ಪಡೆದುಕೊಳ್ಳುತ್ತವೆ. ವಿವರಗಳು ಬೇರೆ ಬೇರೆಯಾಗಿರಬಹುದಾದರೂ ವಸ್ತುವಿಷಯ ಒಂದೇ ಆಗಿರುತ್ತದೆ.

ಪಿತೃಪ್ರಧಾನತೆ ಅಥವಾ ಪುರುಷಪ್ರಧಾನತೆ ಎಲ್ಲೆಡೆ ಒಂದೇ ಆಗಿರುವುದಿಲ್ಲ. ಅದರ ಸ್ವಭಾವ ಒಂದೇ ಸಮಾಜದ ಬೇರೆ ಬೇರೆ ವರ್ಗಗಳಲ್ಲಿ, ಬೇರೆ ಬೇರೆ ಸಮಾಜಗಳಲ್ಲಿ, ಇತಿಹಾಸದ ಬೇರೆ ಬೇರೆ

ಕಾಲಗಳಲ್ಲಿ ಬೇರೆಯಾಗಿರಲು ಸಾಧ್ಯ ಮತ್ತು ಬೇರೆಯಾಗಿವೆ. ಉದಾಹರಣೆಗೆ, ನಮ್ಮ ಅಜ್ಜಿಯ ಕಾಲದಲ್ಲಿ ಪುರುಷಪ್ರಧಾನತೆಯ ಅನುಭವ ಇಂದಿನಂತಿರಲಿಲ್ಲ. ಇದು ಗಿರಿಜನ ಮಹಿಳೆಯರಿಗೆ ಒಂದಾದರೆ, ಮೇಲ್ಜಾತಿಯ ಹಿಂದೂ ಮಹಿಳೆಯರಿಗೆ ಬೇರೆಯಾಗಿರುತ್ತದೆ. ಅಂತೆಯೇ ಅಮೆರಿಕದ ಮಹಿಳೆಯರಿಗೆ ಒಂದಾದರೆ, ಭಾರತದ ಮಹಿಳೆಯರಿಗೆ ಮತ್ತೊಂದಾಗಿರುತ್ತದೆ. ಪ್ರತಿಯೊಂದು ಸಾಮಾಜಿಕ ವ್ಯವಸ್ಥೆ ಅಥವಾ ಚಾರಿತ್ರಿಕ ಅವಧಿಯೂ ಹೇಗೆ ಪುರುಷಪ್ರಧಾನತೆ ಕೆಲಸ ಮಾಡುತ್ತದೆ ಮತ್ತು ಹೇಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳು ಭಿನ್ನವಾಗುತ್ತದೆನ್ನುವುದರ ಬಗ್ಗೆ ತನ್ನದೇ ಭಿನ್ನತೆಗಳನ್ನು ತೋರಿಸಿಕೊಳ್ಳುತ್ತದೆ. ಏನೇ ಆದರೂ ವ್ಯಾಪಕ ತತ್ವಗಳು ಒಂದೇ ಆಗಿರುತ್ತವೆ. ಅಂದರೆ ಪುರುಷರು ಆರ್ಥಿಕ ಸಂಪನ್ಮೂಲಗಳ ಹೆಚ್ಚುಪಾಲನ್ನು ಮತ್ತು ಎಲ್ಲಾ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಂಸ್ಥೆಗಳನ್ನು ನಿಯಂತ್ರಿಸುತ್ತಾರೆ.

ಪುರುಷಪ್ರಧಾನತೆ ಒಂದು ಸಾಮಾಜಿಕ ಸಂರಚನೆಯೂ ಹೌದು; ಒಂದು ಚಿಂತನಾಕ್ರಮ (idiology) ಅಥವಾ ಒಂದು ನಂಬಿಕೆಯ ವ್ಯವಸ್ಥೆಯೂ ಹೌದು. ಇದರ ಅನ್ವಯ, ಪುರುಷರು ಶ್ರೇಷ್ಠರು. ಪುರುಷ ಪ್ರಧಾನತೆಯ ಚಿಂತನಾಕ್ರಮವನ್ನು ಸೃಷ್ಟಿಸುವ ಮತ್ತು ಮುಂದುವರಿಸುವದರಲ್ಲಿ ಧರ್ಮಗಳು ಮುಖ್ಯ ಪಾತ್ರವನ್ನು ವಹಿಸಿವೆ. ಅವು, ಆ್ಯಡಮನ ಬೆನ್ನುಮೂಳೆಯಿಂದ ಇವಳ ಸೃಷ್ಟಿಯಾಯಿತು ಅಥವಾ ದೇವರ ಪ್ರತಿಮೆಯಿಂದ ಪುರುಷನ ಸೃಷ್ಟಿಯಾಯಿತೆನ್ನುವಂಥ ಕಥೆಗಳ ಮೂಲಕ ಪುರುಷ ಶ್ರೇಷ್ಠತೆಯ ನಂಬಿಕೆಗಳನ್ನು ಪ್ರಸಾರ ಮಾಡಿವೆ. ಇಂದು ಮಾಧ್ಯಮಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳು ಕೂಡ ಪುರುಷರನ್ನು ನಿರ್ಧಾರ ತೆಗೆದುಕೊಳ್ಳುವ ಸ್ಥಾನಗಳಲ್ಲಿ ಶಕ್ತಿಶಾಲಿಗಳಾಗಿರುವಂತೆ ಹಾಗೂ ಮಹಿಳೆಯರನ್ನು ಅತ್ಯಾಸಕ್ತ (Voracious) ಗ್ರಾಹಕರು ಪರಾವಲಂಬಿಗಳು ಮತ್ತು ಹೊಟ್ಟೆಕಿಚ್ಚಿನವರನ್ನಾಗಿ ಚಿತ್ರಿಸುವ ಮೂಲಕ ಪುರುಷ ಪ್ರಧಾನತೆಯ ಚಿಂತನಾಕ್ರಮವನ್ನು ಪಸರಿಸುತ್ತಿವೆ. ಸಾಮಾಜಿಕ ವ್ಯವಸ್ಥೆಗಳನ್ನು ಮುಂದುವರಿಸುವ ಮತ್ತು ಜನರ ಮನಸ್ಸುಗಳನ್ನು ನಿಯಂತ್ರಿಸುವುದರಲ್ಲಿ ಚಿಂತನಾಕ್ರಮವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಉದಾಹರಣೆಗೆ, ಮಹಿಳೆಯರನ್ನು ದೇಹಗಳ ಮಟ್ಟಕ್ಕಿಳಿಸಿ ಅವರನ್ನು ವಸ್ತುಗಳಂತೆ ತೋರಿಸುವ ಮೂಲಕ ಅವು ಮಹಿಳೆಯರ ಮೇಲಿನ ಹಿಂಸೆಯನ್ನು ಪ್ರೋತ್ಸಾಹಿಸುತ್ತವೆ. ಚಿಂತನಾಕ್ರಮವು ಸಾಮಾಜಿಕ ವರ್ತನೆ ಮತ್ತು ಸಾಮಾಜಿಕ-ಆರ್ಥಿಕ ಸಂರಚನೆಗಳಿಗೆ ಸಮರ್ಥನೆಯನ್ನೊದಗಿಸುತ್ತದೆ.

ಸಾಮಾನ್ಯವಾಗಿ, ಮಹಿಳೆಯರ ಬದುಕು ಮತ್ತು ಸಮಾಜಗಳಲ್ಲಿನ ಈ ಕೆಳಕಂಡ ಕ್ಷೇತ್ರಗಳು ಪುರುಷಪ್ರಧಾನತೆಯ ನಿಯಂತ್ರಣಕ್ಕೊಳಪಟ್ಟಿವೆಯೆಂದು ಹೇಳಬಹುದು. ಅವೆಂದರೆ :

ಮಹಿಳೆಯರ ಉತ್ಪಾದನಾ ಅಥವಾ ಶ್ರಮದ ಶಕ್ತಿ
ಮಹಿಳೆಯರ ಸಂತಾನೋತ್ಪತ್ತಿ
ಮಹಿಳೆಯರ ಲೈಂಗಿಕತೆ
ಮಹಿಳೆಯರ ಚಲನಶೀಲತೆ
ಆಸ್ತಿ ಮತ್ತಿತರ ಆರ್ಥಿಕ ಸಂಪನ್ಮೂಲಗಳು
ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಂಸ್ಥೆಗಳು

(ಕಮಲಾ ಭಾಸಿನ್ : ವಾಟ್ ಈಸ್ ಪ್ರೇಟ್ರಿಯಾರ್ಕಿ ? : 1993)

ಸಮಾಜದ ಪ್ರಧಾನ ಸಂಸ್ಥೆಗಳಾದ ಕುಟುಂಬ, ಧರ್ಮ, ಕಾನೂನು, ರಾಜಕೀಯ, ಶೈಕ್ಷಣಿಕ ಮತ್ತು ಆರ್ಥಿಕ ಸಂಸ್ಥೆಗಳು, ಮಾಧ್ಯಮಗಳು ಮತ್ತು ಜ್ಞಾನ ಪ್ರಕಾರಗಳು ಪುರುಷ ಪ್ರಧಾನತೆಯ ಸ್ವಭಾವವನ್ನು ಹೊಂದಿವೆಯಷ್ಟೇ ಅಲ್ಲ, ಅದರ ಆಧಾರಸ್ತಂಭಗಳೂ ಆಗಿವೆಯೆನ್ನುವುದು ಅವುಗಳ ವಿಶ್ಲೇಷಣೆಯಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಈ ಸುರಚಿತ (Well-knit) ಮತ್ತು ಆಳವಾಗಿ ಬೇರೂರಿದ ವ್ಯವಸ್ಥೆಯು ಪುರುಷ ಪ್ರಧಾನತೆಯನ್ನು ಅಜೇಯವಾಗಿ ಕಾಣುವಂತಷ್ಟೇ ಅಲ್ಲದೆ ಸಹಜವಾಗಿಯೂ ಕಾಣುವಂತೆ ಮಾಡುತ್ತದೆ.

ಪುರುಷಪ್ರಧಾನತೆಯಲ್ಲಿ ಮಹಿಳೆಯರನ್ನು ನಿಯಂತ್ರಿಸಲು ಮತ್ತು ಅಧೀನದಲ್ಲಿಟ್ಟುಕೊಳ್ಳಲಿಕ್ಕಾಗಿ ವಿವಿಧ ರೀತಿಯ ಹಿಂಸೆಯ ಬಳಕೆಯಾಗಬಹುದು. ಅಲ್ಲದೆ ಅಂಥ ಹಿಂಸೆಯನ್ನು ಕಾನೂನುಬದ್ಧವೆಂದು ಪರಿಗಣಿಸಲೂಬಹುದು. ವಾಸ್ತವದಲ್ಲಿ, ಮಹಿಳೆಯರ ಮೇಲಿನ ಹಿಂಸೆ ಕೇವಲ ವ್ಯಾಪಕವಾಗಿರುವುದಷ್ಟೇ ಅಲ್ಲ; ಅದು ಪುರುಷ ಪ್ರಧಾನ ವ್ಯವಸ್ಥೆಗಳಲ್ಲಿ ವ್ಯವಸ್ಥಿತವಾಗಿಯೂ ಇದೆಯೆಂದು ಸ್ತ್ರೀವಾದಿಗಳು ನಂಬುತ್ತಾರೆ.

ಇವೆಲ್ಲಾ ಮಹಿಳೆಯರು ಪುರುಷಪ್ರಧಾನತೆಯಲ್ಲಿ ಸಂಪೂರ್ಣವಾಗಿ ಅಧಿಕಾರ ರಹಿತರು ಅಥವಾ ಹಕ್ಕುಗಳು, ಪ್ರಭಾವ ಮತ್ತು ಸಂಪನ್ಮೂಲಗಳಿಗೆ ಹೊರತಾದವರು ಎಂದು ಸೂಚಿಸುವುದಿಲ್ಲ. ವಾಸ್ತವದಲ್ಲಿ ಯಾವುದೇ ಅಸಮಾನ ವ್ಯವಸ್ಥೆ ದಮನಿತರ, ಅದರಿಂದ ಸ್ವಲ್ಪಮಟ್ಟಿನ ಲಾಭವನ್ನು ಪಡೆಯುವ ಕೆಲವರ ಪಾಲ್ಗೊಳ್ಳುವಿಕೆಯಿಲ್ಲದೆ ಮುಂದುವರಿಯುವುದಿಲ್ಲ. ಇದು ಪುರುಷಪ್ರಧಾನ ವ್ಯವಸ್ಥೆಗಳ ವಿಷಯದಲ್ಲೂ ನಿಜ. ಮಹಿಳೆಯರು ಅಧಿಕಾರದ ಪಟ್ಟವನ್ನೇರಿದ್ದಾರೆ; ಒಮ್ಮೊಮ್ಮೆ ನಿಯಂತ್ರಣಕ್ಕೊಳಪಟ್ಟಿದ್ದಾರೆ ; ಹೆಚ್ಚು ಅಥವಾ ಕಡಿಮೆ ಪ್ರಮಾಣದ ಲಾಭವನ್ನು ಕಿತ್ತುಕೊಂಡಿದ್ದಾರೆ. ಆದರೆ ಇವೆಲ್ಲವೂ ಈ ವ್ಯವಸ್ಥೆಯು ಪುರುಷಾಧಿಪತ್ಯದ್ದಾಗಿದೆಯೆಂಬ ಸತ್ಯವನ್ನು ಬದಲಿಸುವುದಿಲ್ಲ. ಇಲ್ಲಿ ಮಹಿಳೆಯರು ಕೇವಲ ಹಲವು ರೀತಿಯ ಅವಕಾಶಗಳನ್ನು ಹೊಂದಿದ್ದಾರೆ. ಇದಕ್ಕೆ ಸಮಾನಾಂತರವಾದ ಉದಾಹರಣೆಯೊಂದನ್ನು ಕೊಡಬೇಕೆಂದರೆ, ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯೊಂದರಲ್ಲಿ ಕಾರ್ಮಿಕರು ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತಾರೆ ; ಆಡಳಿತದಲ್ಲೂ ಸ್ವಲ್ಪಮಟ್ಟಿಗೆ ಭಾಗವಹಿಸಬಹುದು. ಆದರೆ ಇದರ ಅರ್ಥ ಅವರು ಅದರ ಮೇಲೆ ನಿಯಂತ್ರಣ ಹೊಂದಿದ್ದಾರೆ ಎಂದಲ್ಲ.
ವಿವಿಧ ಸಂಕೀರ್ಣ ಕಾರಣಗಳಿಗಾಗಿ ಮಹಿಳೆಯರು ಕೂಡ ಪುರುಷಾಧಿಪತ್ಯಕ್ಕೆ ಬೆಂಬಲ



ನೀಡುತ್ತಾರೆ ಮತ್ತು ಮುಂದುವರಿಸುತ್ತಾರೆ. ನಮ್ಮಲ್ಲಿ ಹೆಚ್ಚಿನವರು ಅದರ ಮೌಲ್ಯಗಳನ್ನು ಅಂತರೀಕರಣಗೊಳಿಸಿಕೊಂಡಿದ್ದೇವೆ. ಅಲ್ಲದೆ ಪುರುಷ ಪ್ರಧಾನತೆಯ ಚಿಂತನಾಕ್ರಮದಿಂದ ನಾವು ಯಾವಾಗಲೂ ಸ್ವತಂತ್ರರಲ್ಲ.

ತಮಗೆ ದೊರಕಿದ ವಿಶೇಷ ಸೌಲಭ್ಯಗಳನ್ನು ಉಳಿಸಿಕೊಳ್ಳಲು ಮಹಿಳೆಯರು ಚೌಕಾಶಿ ಮಾಡುವ ಅಧಿಕಾರವನ್ನು ಪುನರ್ಬಳಕೆ ಮಾಡಿಕೊಳ್ಳುತ್ತಾರೆ. ಕೆಲವೊಮ್ಮೆ ಅದು ಇತರ ಮಹಿಳೆಯರಿಗೆ ತೊಂದರೆ ಯನ್ನುಂಟುಮಾಡುತ್ತದೆ. ಆದರೆ ನಾವಿಲ್ಲಿ ಒಟ್ಟಾರೆ ವ್ಯವಸ್ಥೆಯನ್ನು ಗಮನಿಸುವುದು ಮತ್ತು ಈ ಜಟಿಲತೆಗೆ ಕಾರಣಗಳನ್ನು ವಿಶ್ಲೇಷಿಸುವುದು ಮುಖ್ಯವಾಗುತ್ತದೆ. ಮಹಿಳೆಯರು ತಮ್ಮ ಗಂಡುಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ ; ಹೆಣ್ಣುಮಕ್ಕಳನ್ನು ಶಿಕ್ಷಣದಿಂದ ವಂಚಿಸುತ್ತಾರೆ ; ಅವರ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕುತ್ತಾರೆ; ಸೊಸೆಯರನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಾರೆ. ಮುಂತಾದವುಗಳೆಲ್ಲಾ ನಿಜ. ಇವೆಲ್ಲವನ್ನು ಪುರುಷರು ಮತ್ತು ಮಹಿಳೆಯರು ಕುಟುಂಬ ಮತ್ತು ಸಮಾಜಗಳಲ್ಲಿ ಹೊಂದಿರುವ ಅಧಿಕಾರ ಮತ್ತು ಸ್ಥಾನಗಳ ಸಂದರ್ಭದಲ್ಲಿ ಅರ್ಥಮಾಡಿಕೊಳ್ಳಬೇಕಾದ ಅಗತ್ಯವಿದೆ. ಒಬ್ಬ ಗ್ರಾಮೀಣ ಮಹಿಳೆ ಇದನ್ನು ಚೆನ್ನಾಗಿ ವಿವರಿಸಿದಳು: "ಪುರುಷರು ನಮ್ಮ ಕುಟುಂಬಗಳಲ್ಲಿ ಸೂರ್ಯನಿದ್ದಂತೆ. ಅವರಿಗೆ ತಮ್ಮದೇ ಆದ ಬೆಳಕಿರುತ್ತದೆ. (ಅವರು ಸಂಪನ್ಮೂಲಗಳ ಒಡೆಯರಾಗಿರುತ್ತಾರೆ. ಚಲನೆ ಮತ್ತು ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯ ಮುಂತಾದವುಗಳು ಅವರಿಗಿರುತ್ತವೆ.) ಮಹಿಳೆಯರು ಉಪಗ್ರಹಗಳಿದ್ದಂತೆ. ಅವರಿಗೆ ತಮ್ಮದೇ ಆದ ಬೆಳಕಿರುವುದಿಲ್ಲ. ಒಂದು ವೇಳೆ ಸೂರ್ಯನ ಬೆಳಕು ಅವರನ್ನೆಂದಾದರೂ ಸ್ಪರ್ಶಿಸಿದರೆ ಅವರು ಫಳಗುಟ್ಟುತ್ತಾರೆ. ಅದಕ್ಕಾಗಿಯೇ ಅವರು ಸೂರ್ಯನ ಬೆಳಕಿನಲ್ಲಿ ಹೆಚ್ಚಿನ ಪಾಲಿಗಾಗಿ ತಮ್ಮತಮ್ಮಲ್ಲೇ ಸತತವಾಗಿ ಸ್ಪರ್ಧಿಸುವಂತಾಗಿದೆ. ಏಕೆಂದರೆ, ಈ ಬೆಳಕಿಲ್ಲದೆ ಅವರ ಬದುಕಿಲ್ಲ."

ಮಹಿಳೆಯರ ಮೇಲಿನ ಪುರುಷ-ನಿಯಂತ್ರಣವನ್ನು ವರ್ಣಿಸುವ ಸೂಕ್ತ ರೀತಿಯೆಂದರೆ, ಪಿತೃಪ್ರಾಯಾಧಿಪತ್ಯ (Paternalistic dominance). ಇಲ್ಲಿ ಅಧಿಪತ್ಯವಿದೆ. ಆದರೆ ಅದು ತಂದೆಯಂತಿರುತ್ತದೆ. ಕಾರಣ, ಇಲ್ಲಿ ಮಹಿಳೆಯರಿಗೆ ವಸತಿ, ಆಹಾರ ಮತ್ತು ಪರಕೀಯರಿಂದ ರಕ್ಷಣೆಗಳನ್ನೂ ಒದಗಿಸಲಾಗುತ್ತದೆ. ಪಿತೃಪ್ರಾಯದ ಆಧಿಪತ್ಯವು ದಮನಕಾರಿ ಅಂಶಗಳನ್ನು ಹೊಂದಿದೆ. ಆದರೆ ಇದು ಪರಸ್ಪರ ಜವಾಬ್ದಾರಿಗಳ ಜೋಡಿಯನ್ನೊಳಗೊಂಡಿರುತ್ತದೆ.

ಇದನ್ನು ದಮನಕಾರಿಯೆಂದು ಪದೇ ಪದೇ ಗ್ರಹಿಸಲಾಗುವದಿಲ್ಲ. ಇದೇ ಇದನ್ನು ಗುರುತಿಸಿ, ಹೋರಾಟ ನಡೆಸಲು ಕಷ್ಟಕರವನ್ನಾಗಿ ಮಾಡಿದೆ.

ರಾಷ್ಟ್ರೀಯ ವಿಮೋಚನೆ ಎಷ್ಟು ವಿಮೋಚನಕಾರಿಯಾಗಿತ್ತು ?

ರಾಷ್ಟ್ರೀಯ ವಿಮೋಚನಾ ಚಳವಳಿಗಳು ವಸಾಹತೀಯ ಶಕ್ತಿಗಳ ರಾಜಕೀಯ ನಿಯಂತ್ರಣಕ್ಕೆ ಮುಕ್ತಾಯ ಹಾಡಿದವು. ಅಲ್ಲದೆ ಶಾಸಕಾಂಗವನ್ನು ನ್ಯಾಯಾಂಗ-ಮತ್ತು ಶಿಕ್ಷಿಸುವ ಅಧಿಕಾರಗಳಿಂದ ಪ್ರತ್ಯೇಕಿಸುವ ತತ್ವಕ್ಕೆ ಚಾಲನೆ ದೊರಕಿಸಿದವು. ಆದರೆ ಮಹಿಳೆಯರು ಕುಟುಂಬದೊಳಗೆ ತಮ್ಮ ಗಂಡ ಅಥವಾ ತಂದೆಯರ ಆಳ್ವಿಕೆಯಿಂದ ಮುಕ್ತರಾಗಲಿಲ್ಲ. ಇಂದಿಗೂ ಪುರುಷರು ಮನೆಯಲ್ಲಿ ನಿಯಮಗಳನ್ನು ವಿಧಿಸುವ, ಆಗುಹೋಗುಗಳಿಗೆ ತೀರ್ಪು ನೀಡುವ, ತಮ್ಮ ಹೆಂಡತಿ-ಮಕ್ಕಳನ್ನು ದಂಡಿಸುವ ಘನೀಕೃತ/ಕೇಂದ್ರೀಕೃತವಾದ ಮತ್ತು ನಿರಂಕುಶವಾದ ಅಧಿಕಾರಗಳನ್ನು ಉಳಿಸಿಕೊಂಡಿದ್ದಾರೆ. ಹೀಗೆ ಪುರುಷರು.

- ಯಾವಾಗ ಬೇಕಾದರೂ ಲೈಂಗಿಕ ಸಂಬಂಧಗಳನ್ನು ಪಡೆದುಕೊಳ್ಳುವ/ಕೇಳುವ,
- ಗರ್ಭನಿರೋಧಕಗಳನ್ನು ತಮ್ಮ ಹೆಂಡಂದಿರು ಬಳಕೆ ಮಾಡುವುದನ್ನು ತಡೆಗಟ್ಟುವ,
- ತಮ್ಮ ಹೆಂಡಂದಿರು ಮತ್ತು ಹೆಣ್ಣುಮಕ್ಕಳು ತಮ್ಮ ಸಮಯವನ್ನು ಹೇಗೆ ಮನೆಗೆಲಸ, ಶಿಕ್ಷಣ, ವಿರಾಮ ಅಥವಾ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿನಿಯೋಗಿಸುತ್ತಿದ್ದರು ಮತ್ತು ವಿನಿಯೋಗಿಸಬೇಕು ಹಾಗೂ ಉದ್ಯೋಗಕ್ಕಾಗಿ ಸಾರ್ವಜನಿಕ ಸ್ಥಳವನ್ನು ಪ್ರವೇಶಿಸುವಾಗ ನೀತಿ ನಿಯಮಗಳು ಹೇಗಿರಬೇಕೆಂದು ನಿರ್ಧರಿಸುವ,
- ನಿಯಮಗಳ ಉಲ್ಲಂಘನೆಯಾಗಿದೆಯೆಂದು ತಾವು ತೀರ್ಮಾನಿಸಿದಾಗ ದಂಡನೆಯ ಅಥವಾ ತಿದ್ದುವ ಉದ್ದೇಶದಿಂದ ಮಹಿಳೆಯರನ್ನು ಹಿಂಸಿಸುವ, ಆದರೆ ಇದಕ್ಕಾಗಿ ಕಾನೂನಿನನ್ವಯ ಶಿಕ್ಷೆಗೊಳಗಾಗದಿರುವ, ಹೆಂಡಂದಿರು ಸಂಪಾದಿಸಿದ ಅಥವಾ ಅವರ ಪಿತ್ರಾರ್ಜಿತ ಆಸ್ತಿಯನ್ನು ಬಳಸಿಕೊಳ್ಳುವ ಮತ್ತು ಮಾರಿಬಿಡುವ ಮತ್ತು
- ಹೆಂಡಂದಿರು / ಹೆಣ್ಣುಮಕ್ಕಳನ್ನು ಕೊಳ್ಳುವ ಮತ್ತು ಮಾರುವ ಅಥವಾ ಸಾಲವನ್ನು ತೀರಿಸಲು ಅಥವಾ ಪರಪುರುಷರಿಂದ ಆದ ಅವಮಾನಕ್ಕೆ ಪರಿಹಾರವಾಗಿ ಅವರನ್ನು ಮಾರಾಟ ಮಾಡುವ ಸಾಮರ್ಥ್ಯವನ್ನು ಹೊಂದಿದ್ದಾರೆ.

ಈ ಎಲ್ಲಾ ಭಾವನೆಗಳು ಮತ್ತು ವರ್ತನೆಗಳಲ್ಲಿ ಹಲವನ್ನು ಸಮುದಾಯದ ಹೊರಗೆ, ದುಡಿಮೆಯ ಸ್ಥಳ ಮತ್ತು ರಾಜಕೀಯ ಸ್ಥಾನಗಳಲ್ಲಿರುವ ಮಹಿಳೆಯರೊಂದಿಗ ಸಂಬಂಧಗಳಲ್ಲಿ ಪ್ರಯೋಗಿಸಲಾಗುತ್ತದೆ. (ಆ್ಯಶ್‌ವರ್ತ್, ಜಾರ್ಜಿನ್ : ಜೆಂಡೆರ್ಡ್ ಗವರ್ನೆನ್ಸ್: ಆ್ಯನ್ ಅಜೆಂಡಾ ಫಾರ್ ಚೇಂಜ್ : 1996)

ಶಿಕ್ಷಣ ಮತ್ತು ಒಟ್ಟಾರೆಯ ಆಧುನೀಕರಣ ಅಥವಾ ಅಭಿವೃದ್ಧಿಗಳು ಪುರುಷ ಮತ್ತು ಮಹಿಳೆಯರ ನಡುವೆ ಸಮಾನತೆಯನ್ನು ತರುವುದಿಲ್ಲವೆ?

ತರಬೇಕಾಗಿಲ್ಲ. ಎಷ್ಟೋಸಾರಿ ಶಿಕ್ಷಣವೇ ಪುರುಷಪ್ರಧಾನತೆಯನ್ನು ಹೊಂದಿರುತ್ತದೆ. ಅದು ಪುರುಷರು ಮತ್ತು ಮಹಿಳೆಯರ ನಡುವಿನ ಅಸಮಾನತೆಗಳನ್ನು ಸಮರ್ಥಿಸುತ್ತದೆ, ಮುಂದುವರಿಸುತ್ತದೆ ಅಥವಾ ಕಡೆಗಣಿಸುತ್ತದೆ. ಪಠ್ಯಪುಸ್ತಕಗಳು ಮತ್ತು ಮಕ್ಕಳ ಸಾಹಿತ್ಯಗಳಲ್ಲಿರುವ ಲಿಂಗತ್ವದ ಪಕ್ಷಪಾತ ಅಂದರೆ ಪುರುಷಪರವಾದ ಒಲವನ್ನು ಅವುಗಳ ವಿಶ್ಲೇಷಣೆಗಳು ತೋರಿಸಿಕೊಟ್ಟಿವೆ. ಈ ಪಕ್ಷಪಾತ ಹೆಚ್ಚುಕಡಿಮೆ ಎಲ್ಲಾ ಶೈಕ್ಷಣಿಕ ಅಧ್ಯಯನ ಶಿಸ್ತುಗಳಲ್ಲಿ ಮುಂದುವರಿದಿದೆ ; ಮಹಿಳಾ ಚಳವಳಿ ಮತ್ತು ಮಹಿಳಾ ಅಧ್ಯಯನದಲ್ಲಿ ತೊಡಗಿರುವವರು ಎಲ್ಲೆಡೆಯೂ ನಡೆಸುತ್ತಿರುವ ಮುಖ್ಯ ಹೋರಾಟಗಳ ವಿಷಯ ವಸ್ತುಗಳಲ್ಲಿ ಇದೂ ಒಂದಾಗಿದೆ.


ಚರಿತ್ರೆ ಎಂದರೀಗ ಅವನ ಕತೆ ಮಾತ್ರ
ಕಂಡೀತು ಜಗದ ಪೂರ್ಣ ಚಿತ್ರ
ಸಿಕ್ಕಾಗ ನಮಗೆ ಅವಳ ಕತೆಯೂ

(ಮುಂದುವರಿಯುವುದು)

ಬಿತ್ತಾಕಿಗೇ ಗೊತ್ತು ಬೀಜದ ಗುಟ್ಟು

ಸೌಜನ್ಯ : 'ಸಾಗುವಳಿ' ತ್ರೈಮಾಸಿಕೆ

(ಹಿಂದಿನ ಸಂಚಿಕೆಯಿಂದ)



ಹತ್ತಿ ಬಿಡಿಸುವ ತ್ರಾಸ

ಈ ಪ್ರದೇಶದಲ್ಲಿ ಹತ್ತಿದಂತೂ ತುಂಬಾ ತ್ರಾಸ. ನಾವು ಹೆಣಮಕ್ಕಳು ದಿನಕ್ಕೆ ಒಬ್ಬೊಬ್ಬರು 20–30 ಕೆ.ಜಿ ಹತ್ತಿ ಬಿಡಿಸದು. 3–4 ಕೆ.ಜಿ ಉಡಿಯಾಗೇ ತುಂಬಿಕೊಂಡಿರುತ್ತೀವಿ. ಹತ್ತಿ ಬಿಡಿಸುವುದು ಒಳ್ಳೆ ಬಿಸಿಲು ಕಾಲ. ಬಿಸಿಲಲ್ಲಿ ನಿಂತು ಬಗ್ಗಿ ಬಿಡುಸೋ ಕೆಲಸ ಮಾಡಬೇಕಂದ್ರ ನಮಗ ಎಷ್ಟು ತ್ರಾಸ ಐತಿ.

ಎರಡು ಕೈಯಲ್ಲೂ ತಿರಕಂಡು ಬಿಡಿಸಿ, ಬಿಡಿಸಿ ನಡುಗಳೆಲ್ಲ ನೋಯ್ತಾವ. ಅರ್ಧ ಬಗ್ಗಿರಬೇಕು, ಮತ್ತೆ ಒಂದೇ ಗಿಡದ ತಾವ ಇಷ್ಟಿಷ್ಟು ಹೊತ್ತು ನಿಂದರಬೇಕು. ಜತೆಗೆ ಉಡಿಯಾಗ ವಜೆ. ಇದಕ್ಕಿಂತ ಕೆಸರ ಗದ್ದೆಯಲ್ಲಿ ಕೆಲಸ ಮಾಡದು ಎಷ್ಟೋ ಸುಲಭ. ಬತ್ತ ಅದೆಲ್ಲ ಸಸಿ ಹಚ್ಚಿ ಮುಂದಕ್ಕ ಸರಿತಾರ. ಹತ್ತಿ ಬಿಡಿಸುವುದು ಅದಕ್ಕಿಂತ ಕಷ್ಟ. ಒಂದು ಗಿಡದಲ್ಲಿ ಹತ್ತಾರು ಕೊರೆ ಇರುತ್ತ. ಎಲ್ಲ ಕಡಿಗೂ ಕಾಯಿ ಬಿಟ್ಟುಕೊಂಡು ಎಲ್ಲ ಕಡಿಗೂ ಹರಡ್ತಾ ಇರುತ್ತ. ಮುಂದಕ್ಕ ಕೈ ಹಾಕಿದೆವಂದ್ರ ಹಿಂದಿನ ಒಣ ತೊಪ್ಪಲೆಲ್ಲಾ ಅದಕ್ಕೆ ಹತ್ತಿಕೊಂತದ. ಕೈಯಿಂದಲೇ ತೆಗೀಬೇಕು. ಕೈ, ಕಣ್ಣು, ಸೊಂಟ ಎಲ್ಲ ವಿಪರೀತ ನೋಯುತ್ತೆ.

ಅರ್ದರ್ಧ ಸೀರೆನ ಉಡಿಕಟ್ಕ್ಯಂದು ಮ್ಯಾಲೆ ಬಿಸಿಲಿಗೆ ಅಂತ ಹೊಚ್ಚಕ್ಯಂಡು ಹತ್ತಿ ಕಿತ್ತು ಉಡಲಿಗೆ ಹಾಕದು. ಎತ್ತರ ಇದ್ದ ಹೆಂಗಸರಿಗಂತೂ ಬಹಳ ಕಷ್ಟ. ನಾವು ಊಟ ಮಾಡಕ್ಕೂ ಹೋಗಲ್ರಿ, ನಾನು ಊಟ ಮಾಡ್ಕ್ಯಂತ ಕುಂತ್ರೆ ಅಲ್ಲಿ ಕೆಲಸ ನಿಲ್ಲತದ. ನಾವು ಮುಟ್ಟಾದರೂ ಹೋಗಿ ಬಿಡಿಸಲೇ ಬೇಕ್ರಿ. ಎರಡು ದಿವಸ ಕೂರಂಗಿಲ್ರಿ. ಮತ್ತೆ ಅದನ್ನ ಹೊತ್ತಕೊಂಡು ಬರಬೇಕು. ಮನೆಗೆ ಹೋಗಿ ಮತ್ತೆ ಕುಂದ್ರಗಿಲ್ಲವಲ್ಲ. ಅಡಿಗೆ ಮಾಡಬೇಕು, ಗಂಡಗ ಉಣಸಬೇಕು, ಮಕ್ಕಳಿಗೆ ಉಣಸಬೇಕು, ನಾವು ಮಲಗ ವೇಳೆಗೆ ಸಾಕಪ್ಪ ಅನ್ನಿಸಿರ್ತದ. ಮತ್ತೆ ಹೊತ್ತಾರೆ ಮುಂಚೆ ಎದ್ದೇಳಬೇಕು, ಅಡಿಗಿ ಪಡಿಗಿ ಎಲ್ಲ ರೆಡಿ ಮಾಡಬೇಕು 6 ಘಂಟೆಗೆ. ಯಾಕಾರ ಬೆಳಕು ಹರಿತೈತಪ್ಪ ಅನ್ನಿಸ್ತದ. ಎಷ್ಟೇ ಮಾಡಿದರೂ ನಮ್ಮ ಕೆಲಸ ಮುಗಿಯಂಗಿಲ್ರಿ.

ಹತ್ತಿ ಬಿಡಿಸಕ್ಕೆ ತಕ್ಕಂಗೆ ನಮಗೆ ಏನಾರ ಸಲಕರಣೆ ಸಿಗಬಹುದಾ ಅಂತ ಅನ್ನಿಸ್ತೆತಿ. ಆದರ ಹತ್ತಿ ಗಿಡದಲ್ಲಿ ತಳದಲ್ಲಿ ಹತ್ತಿ ಇರತೈತಿ, ಮೇಲೆ ಇರತೈತಿ, ಅದರ ಮಧ್ಯ ಮಧ್ಯ ಕಾಯಿ ಇರ್ತಾವು. ಅದೆಲ್ಲ ಬಿಡಿಸಿ ಹಾಕಬೇಕು. ಅರಳಿದ ಹತ್ತಿ ಅಷ್ಟೇ ಬಿಡಿಶ್ಕ್ಯೊಂಬೇಕು. ಹಸಿ ಕಾಯಿಗೂ ತೊಂದರೆ ಆಗಿರಬಾರದು, ಗಿಡಕ್ಕೂ ತೊಂದರೆ ಆಗಿರಬಾರದು, ಬಿಡಿಸಿದ ಹತ್ತಿನೂ ಕ್ಲೀನ್ ಇರಬೇಕು. ಒಂದು ವೇಳೆ ತೊಟ್ಟಿನ ಸಮೇತ ಕಟ್ ಮಾಡಿಕೊಂಡೆವಂದ್ರ ಕಸ ಜಾಸ್ತಿ ಆಗ್ತದೆ. ರೇಟು ಕಮ್ಮಿ ಆಗ್ತೇತಿ. ಒಣ ತರಗು ಹತ್ತಿಗೆ ಮೆತ್ತಿಕೊಂತು ಅಂದ್ರ ಮತ್ತೆ ತೆಗೆಯದು ಕಷ್ಟ. ಅವಸರಕ್ಕೆ ನಾವು ಸ್ವಲ್ಪ ಕಿತ್ತಕಂಡ್ವಿ ಅಂದ್ರ ನಮ್ಮ ಕೈಗೂ ಅದು ಗಾಯ ಆಗುತ್ತೆ. ಸೂಜಿ ಚುಚ್ಚಿದಂತೆ ಆಗಿರುತ್ತೆ. ಹತ್ತಿ ಒಣಗಿರತೈತಲ್ರಿ, ನಮ್ಮ ಕೈಯೆಲ್ಲ ತರಚಿಕೊಂಡಿರ್ತಾವು. ರಾತ್ರಿಯೆಲ್ಲ ಉರಿತಾವು, ಅಡಿಗಿ, ಊಟ ಮಾಡಕ್ಕೆ ಆಗಂಗಿಲ್ರಿ, ಇದರಲ್ಲಿ ಏನಾದರೂ ಔಷ್ಧಿ ಹೊಡೆದಿದ್ದರೆ ಅದೂ ಕೂಡ ನಮ್ಮ ಮೈಯಲ್ಲಿ ಸೇರುತ್ತ. ಜಯಧರ್ ಹತ್ತಿಗೆ ಔಷ್ಧಿ ಹೊಡೆಯಂಗಿಲ್ಲ. ಹೈಬ್ರಿಡ್ ಹತ್ತಿಗಾದರೆ ತುಂಬಾ ಔಷ್ಧಿ ಹೊಡಿತಾರ. ಇದರಲ್ಲಿ ಸಂದಿ ಗೊಂದಿನಲ್ಲೆಲ್ಲ ವಿಷ ಸೇರಿಕೊಂಡಿರುತ್ತ. ಕೈಯೆಲ್ಲ ಒಡದು ಯಾವಾಗ ಮುಗಿತೈತಪ್ಪ ಈ ಹತ್ತಿ ಬಿಡಿಸದು ಅಂತ ಅನ್ನಿಸತಿರತೈತಿ.

ಶೇಂಗಾ ಕೀಳುವಾಗ..

ಇನ್ನೊಂದು ಈ ಶೇಂಗಾ ಬಿಡಿಸದು. ಇದನ್ನೂ ಬಗ್ಗಿಯೇ ಕೀಳದು. ಇದಕ್ಕಂತೂ ಪೂರ್ತಿ ಬಗ್ಗಬೇಕು. ಶೇಂಗಾ ಮೂರು ಮೂರು ನಾಕು ನಾಕು ಸಾಲಿರತವಲ್ರಿ, ಕುಕ್ಕರಗಾಲಲ್ಲಿ ಕುಂತು ಕಿತಗತಾ ಹೋಗಬೇಕು, ಇಲ್ಲ ಪೂರಾ ಬಗ್ಗಿರಬೇಕು. ನಮ್ಮ ಕಸವು ಎಷ್ಟಿರತದೋ ಅಷ್ಟೂ ಬಿಟ್ಟು ಕಿತ್ಕಬೇಕು. ಅದು ಇನ್ನೂ ಕಷ್ಟ. ಕೆಲ ಕಡೆ ಕೆಂಪು ಜಮೀನಲ್ಲಿ ರೆಂಟೆ ಮೇಲೆ ಮೇಲೆ ಹೊಡೆದು ನಂತರ ಕಿತ್ತಕೊಂತಾರೆ. ನಮ್ಮ ನೆಲದಲ್ಲಿ ಅದು ಆಗಣಿಲ್ಲ. ನಮ್ಮದು ಎರೆ ನೆಲ. ಇದು ಅಷ್ಟು ಗಟ್ಟಿನೂ ಇರುದಿಲ್ಲ. ಸೂರ್ಯಕಾಂತಿ ಹೆಣಮಕ್ಕಳಿಗೆ ಸ್ವಲ್ಪ ಹಗುರದ ಕೆಲಸ. ಜೋಳನು ಅಷ್ಟೆ. ಶೇಂಗಾ ಹತ್ತಿನೇ ಸಮಸ್ಯೆ.

ಗಂಡಸರ ಸಮಕ್ಕೂ ಬದುಕು ಮಾಡಬೇಕು

ಗಂಡುಮಕ್ಕಳ ಸಮಕ್ಕೆ ನಾವು ಕೀಳಲಿಲ್ಲ ಅಂದರ 'ಬರಬ್ಯಾಡ್ರೀ



ನೀವು ಇನ್ನ ಮ್ಯಾಲ' ಅಂತಾರ್ರೀ. ಅವರ ಸಮಕ್ಕೂ ನಾವು ಕಿತಕಂಡು ಹೋಗಬೇಕು. ನಾವು ಅವರಿಗಿಂತ ಸ್ವಲ್ಪ ಮುಂದೇನೇ ಇರ್ತೀವಿ. ಆದರ ನಮಗೆ ಕೂಲಿ ಕಡಿಮಿ. **ಗಂಡಸುಮಗ ಆದರ ಐವತ್ತು ರೂಪಾಯಿ ಕೊಡ್ತಾರ. ಹೆಣಮಕ್ಕಳಿಗೆ ಇಪ್ಪತ್ತೇ. ನಾವು ಅವರಿಗಿಂತ ಮುಂದ ಇದ್ದರೂ ನಮಗೆ ಕೂಲಿ ಕಡಿಮಿ.**

ಬೇಸಾಯದಲ್ಲಿ ನಮ್ಮದು ಬಗ್ಗೋ ಕೆಲಸಾನೆ ಜಾಸ್ತಿ. ಬಗ್ಗದೆ ಯಾವುದೂ ಕೆಲಸ ಇಲ್ಲ. ಬಗ್ಗಿ ಸೂಡು ಕಟ್ಟಬೇಕು. ಕೊನೆಗೆ ನಾವೆ ಎಲ್ಲ ಹೊತ್ತಕಂಡು ಮನೆಗೆ ಬರಬೇಕು. ಎರಡೆರಡು ಸೂಡು ಹೊತ್ತ ಕೊಂಡು ಬರಬೇಕು. ಹೆಣಮಕ್ಕಳಿಗೆ ಕೆಲಸದ ವಜೆ ಕಡಿಮೆ ಆಗಬೇಕು ಅಂತ ಯಾರೂ ಮಾಡಲ್ಲ. ಗಂಡು ಮಕ್ಕಳಿಗೆ ಕಾಲು ಭಾಗ ಕೆಲಸ, ಹೆಣಮಕ್ಕಳಿಗೆ ಮುಕ್ಕಾಲು ಕೆಲಸ. ಪ್ರತಿಯೊಂದರಲ್ಲೂ ಹೆಣಮಕ್ಕಳಿಗೇ. ಎಷ್ಟು ಕಷ್ಟ ಐತಿ ಅಂದ್ರ, ತೀರದಿಲ್ರಿ ಅದು ಹೇಳಿ.

ನಾವು ನಮ್ಮ ಹೊಲದಲ್ಲೂ ಮಾಡಿಕ್ಯಂದು ಬೇರೆಯವರ ಹೊಲದಲ್ಲಿ ಕೂಲಿಗೂ ಹೋಗ್ತೀವಿ. ಇಲ್ಲಿ ಮುಯ್ಯಾಳು ಪದ್ಧತಿ ಜಾಸ್ತಿ. ಇವತ್ತು ನಿಮ್ಮೊಲ ಆದರ, ನಾಳೆ ನಮ್ಮೊಲ. ಇಲ್ಲಿ ಯಾರಿಗೂ ಭೂಮಿ ಜಾಸ್ತಿ ಇಲ್ಲ, ಒಂದೊಂದೆಕರೆ ಎರಡೆಕರೆ ಅಷ್ಟೆ. ಕೆಲಸಮಯ ಬೇರೆ ಊರಿಗೂ ಕೂಲಿಗೆ ಹೋಗ್ತೀವಿ.

ಕೂಲಿಗೆ ಹೋಗುವಾಗ ಮನೆ ಕೆಲಸಾನೂ ನಿಭಾಯಿಸಿಕೊಂಡು ಹೋಗ ಬೇಕ್ರ, ಗಂಡಸರಿಗೆ ಇದೆಲ್ಲ ಏನೂ ಇಲ್ಲ. ಮತ್ತೆ ಅವರಿಗೆ ಕರೆಕ್ಟ್ ಟೈಮಿಗೆ ಊಟ, ಬಟ್ಟೆ ಎಲ್ಲ ರೆಡಿ ಮಾಡಿಕೊಟ್ಟು ನಾವು ಹೊರಡದು. ಒಂದು ಸ್ವಲ್ಪ ಲೇಟಾದರೆ ನಮ್ಮನ್ನೇ ಬಯ್ತಾರ. ಯಜಮಾನರು ಬೇರೆ ಎಲ್ಲಾದರೂ ಕೆಲ್ಸದಲ್ಲಿ (ಉದಾ, ಟೀಚರ್) ಇದ್ದಾರ ಅಂದರ ಅವರನ್ನ ರೆಡಿ ಮಾಡಿ ಕಳಿಸಬೇಕು. ಮತ್ತೆ ನಾವು ರೆಡಿ ಮಾಡಿಕೊಂಡು ಹೋಗಬೇಕು. ಮನಿನಲ್ಲಿ ಅಜ್ಜ, ಅಜ್ಜಿಗುಳಿದ್ರೆ ಅವರನ್ನ ನಿಭಾಯಿಸ್ಕಂಡು ಹೋಗಬೇಕು. ದನಗಳಿದ್ದರೆ ಅವನ್ನ ನೋಡಬೇಕು.

ಇಷ್ಟೆಲ್ಲ ಮಾಡಿಕೊಂಡು ನಾವು ಮನೆಯಲ್ಲಿ ಊಟ ಮಾಡ್ಕೊತಾ ಕುಂತ್ರೆ ಲೇಟಾಗ್ತತಿ. ಅದಕ್ಕೆ ನಾವು ದಾರಿಯಲ್ಲೇ ನಡಕೋತಾ ಊಟ ಮಾಡಿಕೊತಾ ಹೋಗದು. ಊಟ ಮಾಡೂದಕ್ಕೂ ನಮಗ ಟೈಂ ಸಿಕ್ಕಂಗಿಲ್ರಿ. ಒಂದು ವೇಳೆ ಮನಿಯಲ್ಲಿ ಉಣ್ಣಕ್ಕೆ ಕುಂತೆವು ಅಂದ್ರ ಕೆಲ ಮನೆಗಳಲ್ಲಿ, 'ಉಣ್ಣತಾ ಕುಂದ್ರತಾರ' ಅಂತ ಬೈತಾರ. ಹೊಲಕ್ಕೆ ನೀರನ್ನ ತಲಿ ಮೇಲೆ ಹೊತ್ತು ಒಯ್ಯಬೇಕ್ರ, ಅದು ಬಿಸಿಲಲ್ಲಿ ಕಾದು ಕಾದು ಬಿಸಿ ನೀರಾಗಿರ್ತಾವ್ರಿ, ಆ ನೀರನ್ನೇ ಕುಡಿಯದು.

ಒಂದೊಂದು ಸಲ ನಮ್ಮನ್ನ ಹಂಗಸ್ತಾರ, 'ನೀನು ಮಾಡದೆ ಇದ್ರೆ ಆಗುತ್ತ, ರೊಕ್ಕ ಕೊಟ್ಟು ಆಳಿನ ಕೂಟ ಮಾಡುಸ್ತೀವಿ, ಹತ್ತು ರೂಪಾಯಿ ಕೊಡುವಲ್ಲಿ ಇಪ್ಪತ್ತು ರೂಪಾಯಿ ಕೊಟ್ರೆ ಬಂದು ಮಾಡೇ ಮಾಡ್ತಾರ' ಅಂತಾರ. ಇನ್ನು ಕೆಲ ಸಲ, "ಮನ್ಯಾಗ ಆಳಿದ್ದೂ ರೊಕ್ಕ ಕೊಟ್ಟು ಮಾಡ್ಸಹಂಗದಾರಪ್ಪ", "ನೀನು ಮನ್ಯಾಗದಿ, ರೊಕ್ಕ ಕೊಡಬೇಕಾ ಆಳಿಗೆ" ಅಂತ ಚುಚ್ಚತಾರ. ನಾವು ತಡಿಲಾರದೆ ಓಡಿ ಹೋಗಬೇಕು. ಒಂದು ಏಟು ಹೊಡಿಸಿಕೊಳ್ಳಬಹುದು. ಆದರೆ ಮಾತಿನ ಚಾಟಿ ತಡೆಯಕ್ಕ ಆಗಲ್ಲ. ಓಡಬೇಕು ಮತ್ತೆ.


ಈ ಕಷ್ಟ ಕಡಿಮಿ ಮಾಡಲು ಸಾಧ್ಯವಾ?

ಹೆಂಗಸರಿಗೆ ಇಷ್ಟು ಕಷ್ಟ ಇದೆಯಲ್ಲ, ಮುಂದಿನ ತಲೆಮಾರಿಗಾದರೂ ಆ ಕಷ್ಟಗಳು ಪರಿಹಾರ ಆಗಬಹುದಾ ಅಂತ ನಾವು ತಿಳಿದುಕೊಳ್ಳುತ್ತೀವಿ, ಅದು ಸಾಧ್ಯವಿಲ್ಲ. ಈ ಸಣ್ಣ ವಯಸ್ಸಿನ ಹೆಣಮಕ್ಕಳೆಲ್ಲ ತವರು ಮನಿನಾಗ ಸುಖವಾಗಿ ಬೆಳೆದವರು. ಮದುವಿ ಮಾಡಿಕೊಂಡು ಬಂದ ಮೇಲೆ ಮುಗೀತ್ರಿ. ಹೊಲದ ಕೆಲಸ, ಮನಿ ಕೆಲಸ ಎಲ್ಲ ಮಾಡಲೇ ಬೇಕಲ್ಲ ಇಲ್ಲಿ. ಬೇಕಾದಾಗ ತವರು ಮನಿಗೆ ಕಳಿಸ್ತಾರೆ ಅಂತಾರ. ಅದೆಲ್ಲ ಸುಳ್ಳು, ಯಾರನ್ನೂ ಕಳಿಸಲ್ಲ. ತವರು ಮನಿಗೆ ಹೋಗಿ ರೆಸ್ಟ್ ತೆಗೆದುಕೊಳ್ಳಲಿ ಅಂತಾರ. ಹೆಣಮಕ್ಕಳಿಗೆ ಎಲ್ಲೂ ರೆಸ್ಟ್ ಇಲ್ಲ. ಹೆಣಮಕ್ಕಳು ಎಲ್ಲೂ ಕೂರವಲ್ಲರು. ತವರು ಮನಿಗೆ ಏನು 'ನೀನು ದೇವರು ಬಂದಿ' ಅಂತ ಮ್ಯಾಲೆ ಕುಂದ್ರಿಸಲ್ಲ, ಅಲ್ಲೂ ಬದುಕು(ಕೆಲಸ) ನಾವು ಮಾಡಲೇ ಬೇಕು. ಕೆಲವರ ಮನೆಯಾಗ ಮಾತ್ರ ಪ್ರೋತ್ಸಾಹ ಕೊಡ್ತಾರ, ಏನಾರ ಮೀಟಿಂಗಿದ್ದರ ಕಳುಸ್ತಾರ, ಹಬ್ಬ ಬಿದ್ದರೆ ಊರಿಗೆ ಕಳುಸ್ತಾರ.

ನಮ್ಮ ಬದುಕು ಇಷ್ಟು ಕಷ್ಟ ಐತಲ್ಲ ಇದಕ್ಕ ಏನು ಮಾಡಬಹುದು ಅಂತ ನಮ್ಮ ಮನಸ್ಸಿಗೆ ಅನ್ನಿಸ್ತದಾ. ಆದ್ರ ದಾರಿ ಬೇಕಲ್ಲ ಅದಕ್ಕೆ. ಕೆಲವರಿಗೆ ಹೊಲಿಗೆಯಲ್ಲಿ ಕಲೆ ಇರುತ್ತೆ, ಕೆಲವರಿಗೆ ಕಂಪ್ಯೂಟರ್ ಕೆಲಸ ಮಾಡಬಹುದು ಅನ್ನಿಸ್ತದ. ನನಗೆ(ದೇವಿಕಾ) ಎಸ್ಸೆಸ್ಸೆಲ್ಸಿಯಾಗ ಒಂದು ಸಬ್ಜೆಕ್ಟ್ ಹೋಗಿದೆ. ಪಾಸ್ ಮಾಡಿಕೊಳ್ಳಲಿಲ್ಲ. ಮದುವಿ ಆತು. ನನಗೆ ಈಗ ಅದು ಎಷ್ಟು ಅರಿವಾಗುತ್ತಿದೆ ಅಂದರೆ, ಈವಾಗಿನ ಮಕ್ಕಳಿಗೆ ನಾನು ಹೇಳದು, 'ಫೇಲ್ ಮಾಡ್ಕ್ಯಬೇಡ್ರಿ, ಫಾಸ್ ಮಾಡ್ಕ್ಯಳ್ರಿ' ಅಂತ. ಈಗ ಎಲ್ಲ ಪ್ರೋತ್ಸಾಹ ಕೊಡ್ತರ, ಮುಂದಕ್ಕೆ ಓದು ಅಂತಾರ. ಸಂಸಾರಕ್ಕೆ ಬಿದ್ದ ಮೇಲೆ ಅದೆಲ್ಲ ಆಗತೈತಾ?

ನಗುವೇ ನಮ್ಮ ಜೀವಾಳ

ಇಷ್ಟೆಲ್ಲಾ ಇದ್ದೂ ಹೆಂಗಸರ ಮುಖದಲ್ಲಿ ಒಂದು ಸಪ್ಪೆತನ ಇಲ್ಲ. ನಾವು ಯಾವಾಗಲೂ ನಗತಾ ಇರತೀವಿ. ಅದು ಹ್ಯಾಂಗ? ನಮಗೇನಾದರೂ ಹೆಚ್ಚಿಗೆ ಅಂಗಗಳನ್ನೋ, ಹೆಚ್ಚಿನ ಶಕ್ತಿಯನ್ನೋ ದೇವರು ಕೊಟ್ಟಿದ್ದಾನಾ?



ನಮ್ಮ ಗಂಡ್ಸರು ನಮ್ಮನ್ನ ದೇವತೆಗೆ ಹೋಲಿಸಿದ್ದಾರೆ. ಹೆಣಮಕ್ಕಳು "ಆದಿ ಶಕ್ತಿ ಇದ್ದಂಗ, ಆಕಿ ದೇವತಿ ಇದ್ದಂಗಪ್ಪ, ಹೂವಿದ್ದಂಗಪ್ಪ ಯಾವಾಗಲೂ ನಗನಗತಲೆ ಇರ್ತಾಳ' ಅಂತಾರ. ಅಷ್ಟು ಅರ್ಥ ಮಾಡಿಕೊಂಡಿರ್ತಾರೆ, ಮತ್ತೆ ನಮ್ಮನ್ನ ಈ ಥರ ನೋಡ್ತಾರೆ.

ನಮ್ಮ ಒಳಗಡೆನೇ ಒಂದು ಸೆಲಿ ಅಂತಾರಲ್ಲ, ಆ ಥರ ಐತಿ ಅಂತ ನಮ್ಮ ಭಾವನೆ. ಅದು ನಮ್ಮ ಮುಖದಲ್ಲೂ ಅದು ಕಾಣಿಸ್ತಾ ಇರುತ್ತೆ. ತಾಳ್ಮೆ ಅನ್ನತಕ್ಕದ್ದು ಹೆಣಮಕ್ಕಳಿಗೆ ಜಾಸ್ತಿ. ಕೊನೀವರಿಗೂ ಸೈರಣ ಮಾಡೀವಿ. ಇಂಥಾ ಹೆಣ್ಣಿನ ಸ್ಥಾನದಲ್ಲಿ ಇರುವುದರಿಂದಲೇ ಆ ಒಂದು ನಗುಮುಖ, ಒಂದು ಕಳೆ ಹೆಣ್ಣಿಗೆ ಇರುತ್ತೆ. ಮನಸ್ಸಿಗೆ ಉಲ್ಲಾಸ ಸಂತೋಷ ಕೊಡತಕ್ಕಂಥದ್ದು ಅದೇ ನೋಡಿ. "ಈಕಿ ಸಿಟ್ಟು ಮಾಡ್ತಾಳ" ಅಂತಾರ ಅನ್ನೋ ಕಾರಣಕ್ಕೆ ನಾವು ನಗ್ತಾ ಇರ್ತೀವಿ ಅನ್ನದು ಸುಳ್ಳು. ಈ ಪ್ರೀತಿ, ಸಂತೋಷ ಇದೆಲ್ಲ ತೋರ್ಪಡಿಕೆನೂ

ಅಲ್ಲ, ಯಾರೋ ಹೇರಿಕೆ ಮಾಡಿರದೂ ಅಲ್ಲ. ಅದು ನಮ್ಮ ಸಹಜ ಗುಣ. ಗಂಡ ಹೆಂಡತಿ ಜಗಳ ಮಾಡ್ತಾ ಇರ್ತೀವಿ, ಆಗ ಮಕ್ಕಳು ಬರತಾರ. ತಕ್ಷಣ ನಾವು ಎಷ್ಟು ಕುಷಿ ಪಡ್ತೀವಿ ನೋಡ್ರಿ. ಈ ಪ್ರೀತಿ, ಸಂತೋಷ ಅನ್ನದು ಮೊಳಕೆ ಬೀಜ ಇದ್ದಂಗ, ಉನ್ನತ ಆಗ್ತಾನೇ ಇರತದ.

ಹಂಚಿಕೊಂಡಾಗ ಕಷ್ಟ ಬಿಟ್ಟು ಹೋಗುತ್ತದೆ

ನಮ್ಮದೇನು ಕಷ್ಟ ಇದ್ದರೂ ನಾವು ಹೆಂಗಸರು ಇನ್ನೊಬ್ಬರ ಸಂಗಡ ಹೇಳಿಕೊಂಡು ಬಿಡುತ್ತೇವೆ. ಆಗ ಮನಸ್ಸು ಹಗುರ ಆಗತೇತಿ. ಈ ನೋವು ಅನ್ನದು ಹೇಳಿಕೊಂಡಾಗ ನಮ್ಮನ್ನ ಬಿಟ್ಟು ಹೋಗತೇತಿ. ಕಷ್ಟ ಎಲ್ಲಿಂದ ಬಂತೋ ಅಲ್ಲಿಗೇ ಹೋಗ್ತತಿ, ಸಂತೋಷ ಮಾತ್ರ ನಮ್ಮ ಸಂಗಡ ಉಳಿದುಕೊಳ್ಳುತತಿ. ಮೊಳಕೆ ಬೀಜ ಇದ್ದಂಗೆ ಚಿಗಿತಾನೆ ಇರತತಿ. ಆಕಿ ನನ್ನ ಹತ್ತಿರ ಬಂದಿರ್ತಾಳ, ಯಾಕ? ಆಕೀಗೂ ಒಂದು ಕಷ್ಟ ಇರತದ. ಅದನ್ನ ನಾನು ನಾನಾ ವಿಚಾರದಲ್ಲಿ ಮಾತಾಡಿ ಒಂದು ನಾಕು ಶಾಂತಿ ಮಾತನಾಡಿದರೆ ಆಕಿಗೆ ಎಷ್ಟು ಮನಸ್ಸು ಸಮಾಧಾನ ಆಕೈತಿ ನೋಡ್ರಿ.

ನಾವು ಮನಿ ಕಷ್ಟನ ಮನಿಗೇ ಬಿಟ್ಟು ಬಿಡ್ತೀವಿ. ಹೊಲಕ್ಕೆ ಹೋದರೆ ಅಲ್ಲಿ ನಕ್ಕೋತಾ, ಬದುಕು ಮಾಡ್ತಾ ಇರದು, ಅದೇ ಬೇರೆ ಪ್ರಪಂಚ ನಮಗೆ. ಹೊಲದಲ್ಲಿ ಹೋದಾಗಲೂ ಒಂದೆ ಮನೆಯವರಾಗಿ ಇರ್ತೀವಿ. ಈಗ ಹತ್ತಿ ಬಿಡಿಸುತ್ತ ಇರ್ತೀವಿ. ನಿನ್ನ ಕಷ್ಟ ನಾನು ಕೇಳದು, ನನ್ನ ಕಷ್ಟ ನೀನಗೆ ಹೇಳ್ಕ್ಯಣದು, ಹಿಂಗ ಒಬ್ಬರಿಗೊಬ್ಬರು ಕಷ್ಟ ಹೇಳಕ್ಯಂದು, ಮನಸು ಹಗುರ ಮಾಡ್ಕ್ಯಂದು ನಕೋತಾ ಕೆಲಸ ಮಾಡ್ತಾ ಇರದು. ಮಾತುಕತೆ ಎಲ್ಲ ಮುಗಿದರೆ, "ಹಾಡು ಹೇಳವ್ವಾ ಒಂದು" ಅನ್ನದು. ಹಿಂದಿಬ್ಬರು ಹಾಡಿದರೆ ಮುಂದಿಬ್ಬರು ದನಿಕೊಡದು. ಹತ್ತಿ ಬಿಡಿಶ್ಕಂತಾ ಹಾಡು ಕೇಳ್ಕಂತಾ ಹೊತ್ತು ಹೋಗದು ತಿಳಿಯಂಗಿಲ್ಲ.

ನಮಗ ಕಷ್ಟ ಅದ. ಅದನ್ನ ಹೊರಗ ಹಾಕಲಕ್ಕ ವಿಧಾನಾನು ಐತಿ. ಯಾವಾಗ ನಾವು ನಮ್ಮ ಕಷ್ಟಗಳನ್ನ ಹೊರಗಡೆ ಹಾಕಿ ಬಿಡ್ತೇವೋ ಆಗ ನಮಗೆ ದೇಹದ ದಣಿವೂ ಅರಿವಾಗಂಗಿಲ್ರಿ. ಒಮ್ಮೊಮ್ಮೆ ಕಣ್ಣೀರು ಹಾಕ್ತೀವಿ. ಆಗಲೂ ಮನಸ್ಸು ಹಗುರ ಆಗತೈತಿ. ಕಣ್ಣೀರು ಯಾವಾಗಲು ದು:ಖಕ್ಕೆ ಬರುತ್ತೆ ಅಂತ ಅಲ್ಲ. ದೇವಿಕ ಮಾತನಾಡಬೆಕಾದರೆ ಕಣ್ಣಲ್ಲಿ ನೀರು ಬಂತು. ಆಕಿಗೆ ಆ ವಿಚಾರ ಅಷ್ಟು ಮನಸ್ಸಿಗೆ ತಟ್ಟಿತ್ತು, ಕಣ್ಣೀರು ಬಂತು. ನಾನು ಇನ್ನೂ ಏನೋ ಮಾಡಬಹುದು, ಮಾಡಬಹುದಿತ್ತು ಅನ್ನೋ ವಿಚಾರ.

ನಮಗೆ ನಮ್ಮ ಸಂಸಾರನೇ ದೊಡ್ಡದು. ಒಂದು ದಿವಸ ಮನಿ, ಸಂಸಾರ ಇಲ್ಲ ಅಂದರ ನಾವು ನೆಮ್ಮದಿಯಿಂದ ಇರಲ್ರಿ. ಈ ಹುಡುಗರ್ಗಳಿಗೆ ನಾವೇ ಬೇಕು, ನಮಗ ಅವು ಬೇಕು. ಗಂಡಸುಮಕ್ಕಳಿಗೆ ಮುಂಜಾಲಿಂದ ಹಿಡದು ಸಂಜಿತನ ಹೊರಗೆ ಹೋದ್ರೂನೂ ನಡಿತದ. ಅದೇ ಹೆಣಮಕ್ಕಳಿಗೆ ಎಷ್ಟು ಜವಾಬ್ದಾರಿ ನೋಡ್ರೀ, ಒಂದು ತಾಸಾಯ್ತಂದ್ರ ಓಡಿ ಬರ್ತಾರ.

(ಮುಂದುವರಿಯುವುದು)

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ

ಕರ್ನಾಟಕ ರಾಜ್ಯ ಸಮಿತಿ

ವಿಷಯ : ಬ್ಯಾಂಕ್ ಉದ್ಯೋಗಿ ಶೈಲಜಾ ಆತ್ಮಹತ್ಯೆ ತನಿಖೆ ಹಾಗೂ ಶೀಘ್ರ ಕ್ರಮಕ್ಕೆ ಜನವಾದಿ ಆಗ್ರಹ

ನೆಟ್ಟಕಲ್ಲಪ್ಪ ವೃತ್ತದಲ್ಲಿರುವ ಐ.ಎನ್.ಜಿ. ವೈಶ್ಯ ಬ್ಯಾಂಕಿನ ಕಾರ್ಪೊರೇಟ್ ಕಛೇರಿಯಲ್ಲಿ ಟೀಮ್ ಲೀಡರ್ ಆಗಿದ್ದ ಶೈಲಜಾ, ಮೇಲಧಿಕಾರಿ ನೀಡುತ್ತಿದ್ದ ಮಾನಸಿಕ ಹಾಗೂ ಲೈಂಗಿಕ ಕಿರುಕುಳ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿರುವುದು, ನಗರದ ದುಡಿಯುವ ಮಹಿಳೆಯರನ್ನು ತಲ್ಲಣಗೊಳಿಸಿದೆ. ಈ ಕುರಿತು ಸರ್ಕಾರ ಮಧ್ಯಪ್ರವೇಶ ಮಾಡಿ ನಿಷ್ಪಕ್ಷಪಾತ ತನಿಖೆ ನಡೆಸಿ, ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (AIDWA) ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸುತ್ತದೆ.

ಐ.ಎನ್.ಜಿ. ವೈಶ್ಯ ಬ್ಯಾಂಕ್, ಆಸ್ಟ್ರೇಲಿಯನ್ ಆಡಳಿತ ಮಂಡಳಿಗೆ ಸೇರಿದ್ದು, ಶೈಲಜಾ ಅಲ್ಲಿ ಗುತ್ತಿಗೆ ಆಧಾರಿತ ಉದ್ಯೋಗಿಯಾಗಿದ್ದರು. ಮೊದಲೇ ಉದ್ಯೋಗದ ಅಭದ್ರತೆಯಲ್ಲಿದ್ದ ಆಕೆ, ಮೇಲಧಿಕಾರಿ ನೀಡುತ್ತಿದ್ದ ಕಿರುಕುಳ ಕುರಿತು ಆಗಸ್ಟ್ 4 ರಂದು ಬನಶಂಕರಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ ಹಾಗೂ ರಾಜ್ಯ ಮಹಿಳಾ ಆಯೋಗಕ್ಕೂ ಮನವಿ ನೀಡಿದ್ದಾರೆ. ಆದರೂ ಭರವಸೆಯ ಕ್ರಮಗಳು ಎಲ್ಲಿಂದಲೂ ಕಾಣದೆ ಹೋದಾಗ ಆಕೆ ಆತ್ಮಹತ್ಯೆಗೆ ಮೊರೆ ಹೋಗಿದ್ದಾರೆ. ಮಹಿಳೆಯರು ದುಡಿಯುವ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ತಡೆ ಸಮಿತಿಗಳು ರಚಿಸಬೇಕೆಂಬ ಸುಪ್ರಿಂ ಕೋರ್ಟ್ ತೀರ್ಪಿದ್ದರೂ ಅದನ್ನು ಜಾರಿಗೊಳಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಸಮಿತಿ ಇರುವ ಕಡೆಯೂ ಗುತ್ತಿಗೆ ಆಧಾರಿತ ಮಹಿಳೆಯರನ್ನು ಸಮಿತಿಯ ವ್ಯಾಪ್ತಿಗೆ ಒಳಪಡಿಸುವುದಿಲ್ಲ. ಶೈಲಜಾ ಒಂದೆಡೆ ಉದ್ಯೋಗದ ಅಭದ್ರತೆ, ಮತ್ತೊಂದೆಡೆ ಮಹಿಳೆಯಾಗಿ ಅಭದ್ರತೆಯನ್ನು ಎದುರಿಸಿ ಒಂದು ಹಂತದವರೆಗೆ ಹೋರಾಡಿದ್ದಾರೆ. ಗುತ್ತಿಗೆ ನೌಕರಳೆಂಬ ಕಾರಣಕ್ಕೆ ವೈಶ್ಯಬ್ಯಾಂಕಿನ ಆಡಳಿತ ಮಂಡಳಿಯ ನಿರ್ಲಕ್ಷ್ಯ, ಪೊಲೀಸ್ ತನಿಖೆ ಕ್ರಮದ ವಿಳಂಬ ಆಕೆಯನ್ನು ಆತ್ಮಹತ್ಯೆಯಂತಹ ಹತಾಶ ಸ್ಥಿತಿಗೆ ದೂಡಿದೆ.

ಈ ಕುರಿತು ಸರ್ಕಾರ ಕೂಡಲೇ ಮಧ್ಯಪ್ರವೇಶ ಮಾಡಿ, ನಿಷ್ಪಕ್ಷಪಾತ ತನಿಖೆಗೆ ಆದೇಶಿಸಬೆಕು ಹಾಗೂ ಸುಪ್ರೀಂಕೋರ್ಟ್ ತೀರ್ಪನ್ನು ಗಾಳಿಗೆ ತೂರಿರುವ ಸಂಸ್ಥೆಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸುತ್ತದೆ.

Edited, Printed, Published and owned by Rajeshwari H.S., No. 114/5, 9th Cross
2nd Main, Chamarajpet, Bangalore - 560 018.
Printed at ILA Mudrana, No. 36, 40 Ft. Road, Raghavanagara, New Timberyard Layout, Bangalore - 560 026.
Published at No. 114/5, 9th Cross, 2nd Main, Chamarajpet, Bangalore - 560 018. Editor : Rajeshwari H.S.

ಕರ್ನಾಟಕ ವಿದ್ಯುತ್
ನಿಗಮ ನಿಯಮಿತ

ಕೆ.ಪಿ.ಸಿ.ಎಲ್. : ಕರ್ನಾಟಕವನ್ನು ಶಕ್ತಿಯುತಗೊಳಿಸುತ್ತಿದೆ

ವಿದ್ಯುತ್ ಕ್ಷೇತ್ರದ ಬಹಳಷ್ಟು ಉದ್ದಿಮೆಗಳು ಸುಧಾರಣೆಗಳ ಒತ್ತಡಗಳಿಗೆ ಪ್ರತಿಕ್ರಿಯಿಸುತ್ತಿರುವ ಕಾಲದಲ್ಲಿ, ಕೆ.ಪಿ.ಸಿ.ಎಲ್. ನಿಜಕ್ಕೂ ಮುಂಚೂಣಿಯಾಗಿ ಸ್ಪಂದಿಸಿದೆ. ಕಠಿಣ ಸುಧಾರಣೆಗಳಿಂದಾಗಿ ಈ ಕ್ಷೇತ್ರದ ಮೇಲಿರುವ ಒತ್ತಡಗಳ ನಡುವೆಯೂ ಸಹ, ಕೆ.ಪಿ.ಸಿ.ಎಲ್. ಪರಿಸ್ಥಿತಿಗೆ ಹೊಂದಿಕೊಳ್ಳುವ ನೂತನ ಉಪಕ್ರಮಗಳ ಮೂಲಕ ತನ್ನ ಕಾರ್ಯಾಚರಣೆಯನ್ನು ಬದಲಿಸಿಕೊಂಡು, ಮುನ್ನುಗ್ಗಿ ಇಂದು ಇತರ ಉಪಯುಕ್ತತೆಗಳಿಗೆ ಮಾದರಿಯಾಗಿ ನಿಂತಿದೆ. ಕೆಪಿಸಿಎಲ್‌ನ ನವೀನ ತಂತ್ರಜ್ಞಾನ ಮತ್ತು ಹೊಸ ಯೋಜನೆಗಳಿಗೆ ಹಣಹೂಡಿಕೆ, ಪರಿಣಾಮಕಾರಿ ಹಣಕಾಸು, ಗುತ್ತಿಗೆ, ಕಲ್ಲಿದ್ದಲು, ಬೂದಿ ಹಾಗೂ ಪರಿಸರ ಸಂರಕ್ಷಣೆ, ವ್ಯವಸ್ಥಾಪನೆ, ಇವೆಲ್ಲಕ್ಕೂ ಮಿಗಿಲಾಗಿ ಯೋಜನಾಭಿವೃದ್ಧಿ, ಚಾಲನೆ, ಪಾಲನೆ ಮತ್ತು ಇತರ ಉಪಯುಕ್ತತೆಗಳಿಗೆ ಸಲಹಾ ಸೇವೆ ಇವೆಲ್ಲವು ರಾಷ್ಟ್ರದ ವಿದ್ಯುತ್ ಕ್ಷೇತ್ರದ ವರ್ಚಸ್ಸಿಗೆ ಕೊಡುಗೆಗಳಾಗಿವೆ.

1970ರಲ್ಲಿ 746 ಮೆಗಾವಾಟ್ (ಮೆ.ವಾ.) ಸಾಮರ್ಥ್ಯದೊಂದಿಗೆ ರಚಿತಗೊಂಡು ಕೆ.ಪಿ.ಸಿ.ಎಲ್. ಇಂದು ಒಟ್ಟಾರೆ 4995 ಮೆ.ವಾ. ಹೊಂದಿದ್ದು, ಪ್ರಸ್ತುತ ನಿರ್ಮಾಣ ಹಂತದಲ್ಲಿರುವ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಸ್ಥಾವರದ ಮೊದಲ ಹಂತ ಮತ್ತು ನಾಗಝರಿ ಘಟಕಗಳ ನವೀಕರಣ ಸೇರಿದಂತೆ ನೂತನ ಯೋಜನೆಗಳಾದ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಸ್ಥಾವರದ ಎರಡನೇ ಹಂತ, ಬಿಡದಿ, ವಾರಾಹಿ ಜಲವಿದ್ಯುತ್ ಯೋಜನೆ ಹಂತ-2 ಮತ್ತು ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರ (ಘಟಕ-8) ಯೋಜನೆಗಳಿಂದ ಮುಂದಿನ 5 ವರ್ಷಗಳಲ್ಲಿ ಸುಮಾರು 3000 ಮೆ.ವಾ.ಗಳಿಗೂ ಹೆಚ್ಚಿನ ವಿದ್ಯುತ್ ಸಾಮರ್ಥ್ಯವನ್ನು ವಿದ್ಯುತ್ ಜಾಲಕ್ಕೆ ಸೇರಿಸಿ ಕರ್ನಾಟಕವನ್ನು ಶಕ್ತಿಯುತಗೊಳಿಸುತ್ತಿದೆ.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
82, ಶಕ್ತಿಭವನ, ರೇಸ್‌ಕೋರ್ಸ್ ರಸ್ತೆ
ಬೆಂಗಳೂರು - 560 001

ದೂರವಾಣಿ : 2225 6568, ಫ್ಯಾಕ್ಸ್ : 2225 2144
ಇಮೇಲ್ : cccm@karnatakapower.com
ವೆಬ್‌ಸೈಟ್ : www.karnatakapower.com

ಸಹೃದಯಿ ಓದುಗರಲ್ಲಿ

ಯಾವುದೇ ಚಳವಳಿ ಸ್ವಾಯತ್ತತೆಯನ್ನು ಉಳಿಸಿಕೊಂಡಾಗ ಮಾತ್ರ ಶಕ್ತಿಯುತವಾಗಲು ಸಾಧ್ಯ. ಮಾನಸ ಸ್ವಾಯತ್ತ ಪರಿಕಲ್ಪನೆಯನ್ನು ತಾನಿಡುವ ಪುಟ್ಟ ಹೆಜ್ಜೆಯಲ್ಲೂ ಜಾರಿಗೆ ತರಲು ಪ್ರಯತ್ನಿಸಿದೆ. ಇದುವರೆಗೂ ಮಾನಸದ ಸಭೆಗೆ ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗಮಂದಿಂದ ಮೆಟ್ಟಿಲುಗಳು ಆಸರೆಯಾಗಿದ್ದವು. ಮಾನಸಕ್ಕೆ ತನ್ನದೇ ಆದ ಒಂದು ಕಛೇರಿ ಮಾಡಬೇಕೆಂಬ ಕನಸು ಈಗ ನನಸಾಗಿದೆ. ಈ ಕೆಳಗಿನ ವಿಳಾಸದಲ್ಲಿ ಮಾನಸಕ್ಕೆ ಒಂದು ಪುಟ್ಟ ಮನೆಯನ್ನು ಬಾಡಿಗೆಗೆ ತೆಗೆದುಕೊಂಡಿದ್ದೇವೆ. ಬಾಡಿಗೆ 1600/–. ಇದು ನಮಗೆ ಹೊರೆಯಾದರೂ, ಮಾನಸ ಸದಸ್ಯರಿಂದ ಸಂಗ್ರಹಿಸುತ್ತಿದ್ದೇವೆ. ಸಹೃದಯರು ಬಾಡಿಗೆ ಹಣವನ್ನು ಕೊಡುಗೆಯಾಗಿ ನೀಡುವುದರ ಮೂಲಕ ನಮ್ಮ ಈ ಪ್ರಯತ್ನಕ್ಕೆ ನೆರವು ನೀಡಬೇಕೆಂದು ಕೋರುತ್ತೇವೆ. ಕೊಡುಗೆ ನೀಡಿದವರ ಹೆಸರುಗಳನ್ನು ಮಾನಸದಲ್ಲಿ ಪ್ರಕಟಿಸಲಾಗುವುದು.

ನೀವು ಮಾನಸಕ್ಕೆ ಹೀಗೆ ಸಹಕರಿಸಬಹುದು :

- ಪತ್ರಿಕೆಗೆ ಚಂದಾದಾರರಾಗುವುದರ ಮೂಲಕ
- ಮಾನಸ ವೇದಿಕೆಗೆ ಸದಸ್ಯರಾಗುವುದರ ಮೂಲಕ
- ಕವನ, ಲೇಖನ, ವರದಿ, ಮುಂತಾದವುಗಳನ್ನು ಕಳಿಸಿಕೊಡುವುದರ ಮೂಲಕ
- **ಪತ್ರಿಕೆಯನ್ನು ಪ್ರಾಯೋಜಿಸುವುದರ ಮೂಲಕ**

ಸಂಪಾದಕ ಮಂಡಳಿ

Posted on 9th of every month
at Chamarajpet Post Office

Registered
Magazine

ವಿಳಾಸ :
ನಮ್ಮ ಮಾನಸ
34/1, 2ನೇ ಕ್ರಾಸ್, ಆಜಾದ್ ನಗರ,
ಚಾಮರಾಜಪೇಟೆ, ಬೆಂಗಳೂರು – 560 018

'NAMMA MANASA', REGD. No. : MAG(3) NPP/399(A) / 2006-07
KA/BGS/2074/2007-09